ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

03 ಸೆಪ್ಟೆಂಬರ್, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -172 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಅಯೋಧ್ಯೆ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸಿಇಒ ಆಗಿ ನಿವೃತ್ತ ಏರ್ ಮಾರ್ಷಲ್ ಜೀತೇಂದ್ರ ಮಿಶ್ರಾ ಅವರನ್ನು ನೇಮಕ ಮಾಡಲಾಗಿದೆ.


ಮಾರುತಗಳು : ಜೀವಜಲ ನೀಡುವ ಪ್ರಕೃತಿಯ ಅದ್ಭುತ ವ್ಯವಸ್ಥೆ » 2


ಹಾಸನಾಂಬ ಮಹೋತ್ಸವ ಸಿದ್ಧತೆಗೆ ಸೂಚನೆ 3


ಪರಿಹಾರ ದಾನವಲ್ಲ ಹೊಣೆಗಾರಿಕೆ ಎಂದ ನೇಪಾಳ » 4

# ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಹೆಚ್‌ಡಿಕೆ ಆಗ್ರಹ

## ಎಇಇ ಅಕ್ರಮ ನೇಮಕಾತಿ | ಸಾಲು ಸಾಲು ಪ್ರಶ್ನೆಗಳನ್ನು ಮುಂದಿಟ್ಟ ಕುಮಾರಸ್ವಾಮಿ

• ಪ್ರಜೋದಯ ವರದಿ

**ಬೆಂಗಳೂರು:** ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಈ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದಾಗ ನಡೆದ ಸಹಾಯಕ ಕಾರ್ಯಪಾಲಕ ಇಂಜಿನೀಯರ್ ನೇಮಕಾತಿಯಲ್ಲಿ ಭಾರೀ ಅಕ್ರಮ ನಡೆದಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಗಂಭೀರ ಆರೋಪ ಮಾಡಿದರು.

ಬುಧವಾರ ಜೆಡಿಎಸ್ ಕಚೇರಿ ಜೆ.ಪಿ.ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನೇಮಕಾತಿ ಯಲ್ಲಿ ಅಕ್ರಮ ನಡೆದಿರುವುದು ನಿಮ್ಮ ಗಮನಕ್ಕೆ ಬಂದಿಲ್ಲ ಎಂದರೆ ಯಾರ ಕಿವಿಗೆ ಹೂ ಮುಡಿಸುತ್ತಿದ್ದೀರಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅಕ್ರಮದ ಬಗ್ಗೆ ನನಗೆ ಗೊತ್ತೇ ಇಲ್ಲ ಎಂದಿರುವ ಪ್ರಿಯಾಂಕ್ ಖರ್ಗೆ ನೈತಿಕ ಹೊಣೆ ಹೊತ್ತು ತಕ್ಷಣವೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು.

ಪರೀಕ್ಷೆ ನಡೆಸಿ ಪಟ್ಟಿ ಕೊಡುವುದು ಮಾತ್ರ ಕೆಪಿಎಸ್‌ಸಿ ಕೆಲಸ, ನೇಮಕಾತಿ ಆದೇಶ ನೀಡು ವುದು ಇಲಾಖೆಯ ಜವಾಬ್ದಾರಿ. ಹೀಗಿರುವಾಗ ನಿಮ್ಮ ಇಲಾಖೆಯಿಂದ ನೇಮಕಾತಿ ಪತ್ರ ಹೋಗುವಾಗ ಅಕ್ರಮ ಆ ಸಂದರ್ಭದಲ್ಲಿ ಸಚಿವರಾಗಿದ್ದ ಪ್ರಿಯಾಂಕ್ ಖರ್ಗೆ ಅವರ ಗಮನಕ್ಕೆ ಬಂದಿರಲಿಲ್ಲವೇ. ಈ ಅಕ್ರಮಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವುದು ನಿಮ್ಮ ಗಮನಕ್ಕೆ ಇರಲಿಲ್ಲವೇ. ಕಳೆದ ಒಂದೂವರೆ ವರ್ಷದಿಂದ ನ್ಯಾಯಾಲಯಕ್ಕೆ ಸರಿಯಾದ ಮಾಹಿತಿ ನೀಡದೆ ಪ್ರಕರಣವನ್ನು ಎಳೆಯುತ್ತಿರುವುದು ಏಕೆಂದು ಪ್ರಶ್ನಿಸಿದರು.

ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಉಪಸಮಿತಿ ಸ್ಪಷ್ಟ ವರದಿ ನೀಡಿದ ಮೇಲೂ ಸರ್ಕಾರ ಷರತ್ತುಬದ್ಧವಾಗಿ 24 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಿದ್ದು ಏಕೆ.



### ರೆಸಾರ್ಟ್‌ನಲ್ಲಿ ಪರೀಕ್ಷೆ

**ಆಹಾರ ಇಲಾಖೆಯಲ್ಲಿದ್ದ ಜ್ಞಾನೇಂದ್ರ ಅವರು, ಪೊಲೀಸ್ ಅಧಿಕಾರಿಗಳ ಮಕ್ಕಳನ್ನು ಆಯ್ಕೆ ಮಾಡಲು ರೆಸಾರ್ಟ್‌ನಲ್ಲಿ ಪರೀಕ್ಷೆ ಬರೆಸಿದ್ದಾರೆ. ಕೆಎಎಸ್ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮದ ಬಗ್ಗೆ ಸಿಐಡಿ ನಡೆಯುತ್ತಿರುವ ತನಿಖೆಯನ್ನು ನ್ಯಾಯಯುತವಾಗಿ ನಡೆಸಿ. ತೋರಿಕೆಗೆ ತನಿಖೆ ಮಾಡಿ ಮುಚ್ಚಿ ಹಾಕಬೇಡಿ. ಪ್ರಿಯಾಂಕ್ ಖರ್ಗೆ ಅವರು ಅಕ್ರಮದಲ್ಲಿ ಭಾಗಿಯಾಗಿದ್ದರೋ ಬಿಟ್ಟಿದ್ದಾರೋ ಗೊತ್ತಿಲ್ಲ. ಆದರೆ, ಅವರ ಜವಾಬ್ದಾರಿ ಏನಿತ್ತು. ಆದೇಶ ಪ್ರತಿ ಕೊಟ್ಟಿರುವುದು ಯಾರು. ಇಷ್ಟೆಲ್ಲಾ ಆಗಿದ್ದಾಗ ರಾಜೀನಾಮೆ ಕೇಳ್ಬೇಕೋ ಬೇಡವೋ ಎಂದು ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.**

ಹೈಕೋರ್ಟ್ ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಅಭಿಪ್ರಾಯಪಟ್ಟಿದ್ದು ನಿಮ್ಮ ಗಮನಕ್ಕೆ ಬಂದಿ ಲ್ಲವೇ. ಅಕ್ರಮದ ಮಾಹಿತಿ ಇರಲಿಲ್ಲವೆಂದಾದರೆ, ಉಪಸಮಿತಿ ವರದಿ ಆಧರಿಸಿ ನೀವೇಕೆ ಇಲಾಖಾ ಮಟ್ಟದಲ್ಲಿ ತನಿಖೆ ನಡೆಸಲಿಲ್ಲ. ಪ್ರಕ್ರಿಯೆಯಲ್ಲಿ ಲೋಪವಿರುವುದು ಗೊತ್ತಿದ್ದೇ ಷರತ್ತು ಬದ್ಧ ನೇಮಕಾತಿ ನೀಡಲಾಯಿತೇ ? ಅಕ್ರಮ ನಡೆದಿದ್ದರೂ ಇಷ್ಟು ತರಾತುರಿಯಲ್ಲಿ ನೇಮಕಾತಿ ಆದೇಶ ಪತ್ರ ಕೊಟ್ಟಿದ್ದರ ಹಿಂದಿನ ಮರ್ಮವೇನೆಂದು ಸಾಲು ಸಾಲು ಪ್ರಶ್ನೆಗಳನ್ನು ಮುಂದಿಟ್ಟರು.

ಕೆಪಿಎಸ್‌ಸಿ ಸಂಸ್ಥೆ ಆರಂಭವಾಗಿದ್ದು ಒಳ್ಳೆಯ ಉದ್ದೇಶಕ್ಕೆ. ಆದರೀಗ ಸಂಸ್ಥೆಯಲ್ಲಿ ಬೇರೆ ರೀತಿ ನಡೆಯುತ್ತಿದೆ. ಇತ್ತೀಚೆಗೆ ರಾಜ್ಯ ಸರ್ಕಾರದಿಂದ ಕಾರ್ಯದರ್ಶಿ ನೇಮಕ ಮಾಡುತ್ತಾರೆ. ಪರೀಕ್ಷೆ ನಡೆಸಲು ಸರ್ಕಾರದಿಂದ ಒಬ್ಬ ಕಂಟ್ರೋಲರ್ ನೇಮಕ ಮಾಡುತ್ತಾರೆ. ಅಭ್ಯರ್ಥಿಗಳನ್ನು ರೆಸಾರ್ಟ್‌ಗೆ ಕರೆದುಕೊಂಡು ಹೋಗಿ ಪರೀಕ್ಷೆ ಬರೆಸುತ್ತಿದ್ದಾರೆಂದು ಆರೋಪಿಸಿದರು.

ನಾನು ಕೆಪಿಎಸ್‌ಸಿ ಮಾಜಿ ಅಧ್ಯಕ್ಷರನ್ನು ಜೈಲಿನಲ್ಲಿ ಭೇಟಿ ಮಾಡಿದ್ದು ನಿಜ. ನಾನು ಅವರನ್ನು ಭೇಟಿಯಾದಾಗ ಅವರು ಅಧ್ಯಕ್ಷ ಸ್ಥಾನದಲ್ಲಿ ಇರಲಿಲ್ಲ. ಅವರ ಕಾಲದಲ್ಲಿ 13 ಸಾವಿರ ಅಭ್ಯರ್ಥಿ ಗಳಿಗೆ ಕೆಲಸ ಕೊಟ್ಟಿದ್ದಾರೆ. ಯಾವುದೇ ರೀತಿ ಒಂದು ರೂ. ಹಣ ತೆಗೆದುಕೊಂಡಿಲ್ಲ. ಪ್ರಾಮಾಣಿಕ ವಾಗಿ ಕೆಲಸ ಮಾಡಿದ್ದಾರೆ. ನಮ್ಮ ಮೇಲಿನ ವಿಚಾರಕ್ಕೆ ಮಾಜಿ ಅಧ್ಯಕ್ಷರನ್ನ ದ್ವೇಷ ಮಾಡುವುದು ಬೇಡ. ಯಾವ ರೀತಿ ಅಧ್ಯಕ್ಷರ ಆಯ್ಕೆ ಆಯ್ತು ಅಂತ ನಿಮ್ಮ ತಂದೆ ಕೇಳಿ ತಿಳಿದುಕೊಳ್ಳಿ ಎಂದು ಪ್ರಿಯಾಂಕ್ ಖರ್ಗೆ ಅವರಿಗೆ ತಿರುಗೇಟು ನೀಡಿದರು.

## ಬರಪೀಡಿತ ಪಟ್ಟಿಯಿಂದ ಬೇಲೂರು ಕಡೆಗಣನೆಗೆ ರೈತ ಸಂಘ ಆಕ್ರೋಶ



• ಪ್ರಜೋದಯ ವರದಿ

**ಹಳೇಬೀಡು:** ಬೇಲೂರು ತಾಲ್ಲೂಕನ್ನು ಬರ ಪೀಡಿತ ಪಟ್ಟಿಗೆ ಸೇರಿಸಬೇಕೆಂದು ಆಗ್ರಹಿಸಿ ಬುಧವಾರ ರಾಜ್ಯ ರೈತ ಸಂಘ ಹಾಗು ಹಸಿರು ಸೇನೆಯಿಂದ ಪ್ರತಿಭಟನೆ ನಡೆಸಲಾಯಿತು.

ಹೊಯ್ಸಳ ವೃತ್ತದಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ನಾಡಕಚೇರಿ ಎದುರು ಜಮಾಯಿಸಿ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಕ್ಷೇತ್ರದ ಜನರ ಸಮಸ್ಯೆ ಆಲಿಸಬೇಕಿದ್ದ ಶಾಸಕ ಹೆಚ್.ಕೆ. ಸುರೇಶ್ ಹಾಗು ಮಾಜಿ ಸಚಿವ ಬಿ. ಶಿವರಾಮ್ ಒಬ್ಬರನೊಬ್ಬರು ದೂರುವುದರಲ್ಲಿ ಕಾಲ ಕಳೆಯುತ್ತಿದ್ದಾರೆ. ಅವರೇನೂ ರೈತರ ಪರ ಮಾತನಾಡುತ್ತಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ ಅವರು ಮಾತನಾಡಿ, ಬೇಲೂರು, ಆಲೂರು, ಸಕಲೇಶಪುರ ತಾಲ್ಲೂಕುಗಳು ಬರ ಪೀಡಿತ ಪಟ್ಟಿಯಿಂದ ವಂಚಿವಾಗಿರುವುದು ಯಕ್ಷ ಪ್ರಶ್ನೆ ಯಾಗಿದೆ. ಮೂರು ತಾಲ್ಲೂಕುಗಳಿಗೆ ಬಿಜೆಪಿ ಶಾಸಕರು ಇರುವುದರಿಂದ ಬರಪೀಡಿತ ಘೋಷಣೆಗೆ ಸರ್ಕಾರ ಹಿಂದೇಟು ಹಾಕಿರಬಹುದು. ಬೇಲೂರು, ಸಕಲೇಶಪುರ ಶಾಸಕರು ಸರ್ಕಾರದ ವಿರುದ್ಧ ಹೋರಾಟ ಮಾಡಬೇಕು. ದಕ್ಷತೆಯಿಂದ ಇಬ್ಬರು ಶಾಸಕರು ಧ್ವನಿ ಎತ್ತದಿದ್ದರೆ ನಿಮ್ಮನ್ನು

» ನಾಲ್ಕನೇ ಪುಟದಲ್ಲಿ

## ಶಾಸಕ ಸ್ವರೂಪ್ ವಿರುದ್ಧ ಅಪಪ್ರಚಾರ: ದೂರು ದಾಖಲಿಸುವ ಎಚ್ಚರಿಕೆ

• ಪ್ರಜೋದಯ ವರದಿ

**ಹಾಸನ:** ಸಮುದಾಯ ಭವನ ಉದ್ಘಾಟನಾ ಸಮಾರಂಭಕ್ಕೆ ಬಂದಿದ್ದ ಶಾಸಕ ಹೆಚ್.ಪಿ. ಸ್ವರೂಪ್ ಅವರಿಗೆ ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡರು ಎಂಬರ್ಥದ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಶಾಸಕರ ವಿರುದ್ಧ ಅಪಪ್ರಚಾರ ಮಾಡುತ್ತಿರು ವವರ ವಿರುದ್ಧ ದೂರು ದಾಖಲಿಸುವುದಾಗಿ ತಾಲ್ಲೂಕಿನ ಮಾರಿಗುಡಿಕೊಪ್ಪಲು ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಈ ಬಗ್ಗೆ ಗ್ರಾಮದಲ್ಲಿ ಸಭೆ ನಡೆಸಿ ಮಾತನಾಡಿದ ಮುಖಂಡರು, ಶಾಸಕ ಹೆಚ್.ಪಿ.ಸ್ವರೂಪ್ ಭಾಗವಹಿಸಿದ್ದ ಸಮಾರಂಭದಲ್ಲಿ ಯಾವುದೋ ವಿಚಾರವಾಗಿ ನಡೆದ ವಾಗ್ವಾದವನ್ನು ಕೆಲವು ಕಿಡಿಗೇಡಿಗಳು ತಪ್ಪಾಗಿ ಬಿಂಬಿಸಿ ಶಾಸಕರ ಹೆಸರನ್ನು ಹಾಳು ಮಾಡುವ ಕೆಲಸ ಮಾಡುತ್ತಿದ್ದಾರೆಂದರು.

ಜನಪರ ಕೆಲಸಗಳ ಮೂಲಕ ಅಭಿವೃದ್ಧಿಗೆ ಶ್ರಮಿಸುತ್ತಿರುವ ಶಾಸಕರು ನಮ್ಮ ಗ್ರಾಮಕ್ಕೂ ಕೋಟ್ಯಾಂತರ ರೂಪಾಯಿ ಅನುದಾನದಲ್ಲಿ ಹಲವು ಕಾಮಗಾರಿ ಮಾಡಿದ್ದಾರೆ. ಅದನ್ನು ಸಹಿಸದೆ ಕೆಲವು ಕಿಡಿಗೇಡಿಗಳು ಹಿಂಬದಿಯಿಂದ ವಿಡಿಯೋ ಮಾಡಿ ಅವರ ಹೆಸರನ್ನು ಹಾಗು ಗ್ರಾಮದ ಹೆಸರನ್ನು ಕೆಡಿಸುವ ಹುನ್ನಾರ ಮಾಡಿದ್ದಾರೆಂದು ದೂರಿದರು.



ಗುದ್ದಲಿ ಪೂಜೆ ಹಿನ್ನಲೆಯಲ್ಲಿ ಕೇವಲ ಗ್ರಾಮಸ್ಥರು ಮಾತ್ರವಲ್ಲ ಸುತ್ತಮುತ್ತಲ ನಾಲ್ಕೈದು ಹಳ್ಳಿಗಳ ಜನರು ಆಗಮಿಸಿದ್ದರು. ಅದರಲ್ಲಿ ವಿರೋಧ ಪಕ್ಷಗಳ ಮುಖಂಡರು ಇದ್ದರು. ಇಂತಹ ಹೀನ ಕೃತ್ಯ ಮಾಡಿ ಶಾಸಕರ ಹೆಸರನ್ನು ಹಾಳು ಮಾಡಲು ಯತ್ನಿಸುತ್ತಿದ್ದಾರೋ ಅಂತಹವರ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಲಾಗುವುದು ಎಂದರು.

ಈ ರೀತಿಯ ಅಪಪ್ರಚಾರ ಸರಿಯಲ್ಲ ಒಳ್ಳೆ ರೀತಿಯ ಕೆಲಸ ಮಾಡುವ ಜನಪ್ರತಿನಿಧಿಗಳಿಗೆ ಬೆಂಬಲ ನೀಡಬೇಕು. ಅದನ್ನು ಬಿಟ್ಟು ಇಲ್ಲಸಲ್ಲದ ಆರೋಪಗಳನ್ನು ಮಾಡಿ ಹೆಸರು ಕೆಡಿಸುವ ಪರಿಯನ್ನು ನಾವು ಒಪ್ಪುವುದಿಲ್ಲ. ಶಾಸಕರಿಗೆ ನಮ್ಮ ಗ್ರಾಮಕ್ಕೆ ಅಭಿವೃದ್ಧಿ ಕೆಲಸಗಳಿಗೆ ಬಂದಾಗ ವಿಡಿಯೊ ಮಾಡಿ ಹೆಸರು ಕೇಳಿಸುವ ಕೆಲಸ ಮಾಡಿರುವುದಕ್ಕೆ ಗ್ರಾಮದ ಪರವಾಗಿ ನಾವು ಕ್ಷಮೆ ಕೇಳುತ್ತೇವೆಂದು ಹೇಳಿದರು.

ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ವೆಂಕಟೇಶ್, ಹರ್ಷ, ಸುರೇಶ್, ಮಂಜೇಗೌಡ, ಶಿವು, ಮೊಗಣ್ಣ ಬಂಗಾರಿ ಹಲವರಿದ್ದರು.

# ಪೌರ ಕಾರ್ಮಿಕರು ಯೋಧರಷ್ಟೇ ಶ್ರೇಷ್ಟರು

## ಆರ್ಥಿಕ, ಸಾಮಾಜಿಕ ಭದ್ರತೆ ಕಲ್ಪಿಸಲು ಆದ್ಯತೆ | ಜಿಲ್ಲಾಧಿಕಾರಿ ಲತಾಕುಮಾರಿ ಭರವಸೆ

• ಪ್ರಜೋದಯ ವರದಿ

**ಹಾಸನ:** ನಗರವನ್ನು ಸ್ವಚ್ಛ, ಆರೋಗ್ಯ ಮತ್ತು ಸುಂದರವಾಗಿಡುವಲ್ಲಿ ಪೌರ ಕಾರ್ಮಿಕರ ಕೊಡುಗೆ ಅತ್ಯಮೂಲ್ಯವಾಗಿದ್ದು, ಅವರು ಯೋಧರಷ್ಟೇ ಶ್ರೇಷ್ಟರೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ ಹಾಗು ಸಮಾಜ ಕಲ್ಯಾಣ ಇಲಾಖೆಯಿಂದ ಜಿಲ್ಲಾ ಪೌರ ಕಾರ್ಮಿಕರೊಂದಿಗೆ ನಗರದ ಡಾ.ಬಿ. ಆರ್.ಅಂಬೇಡ್ಕರ್ ಭವನ ದಲ್ಲಿ ಬುಧವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪೌರ ಕಾರ್ಮಿಕರ ಕಠಿಣ ಪರಿಶ್ರಮದಿಂದಲೇ ಸಮಾಜ ಸ್ವಚ್ಛ ಹಾಗು ಆರೋಗ್ಯಕರವಾಗಿರಲು ಸಾಧ್ಯವಾಗಿದೆ. ತಮ್ಮ ಆರೋಗ್ಯ ಹಾಗು ಜೀವನವನ್ನೇ ಪಣಕ್ಕಿಟ್ಟು ಕರ್ತವ್ಯ ನಿರ್ವಹಿಸುವ ಪೌರ ಕಾರ್ಮಿಕರ ಸೇವೆಯನ್ನು ಎಲ್ಲರೂ ಗೌರವಿಸಬೇಕು. ಅವರಿಗೆ ಆರ್ಥಿಕ ಹಾಗು ಸಾಮಾಜಿಕ ಭದ್ರತೆ ಕಲ್ಪಿಸುವುದು ಅಗತ್ಯ. ಅವರನ್ನು ಸಮಾಜ ಉತ್ತಮ ಸ್ಥಾನದಲ್ಲಿ ಕಾಣುವಂತಾಗಬೇಕು.




ಸಂವಿಧಾನ ಎಲ್ಲರಿಗೂ ಸಮಾನ ಅವಕಾಶ ನೀಡಿದ್ದು, ಪೌರ ಕಾರ್ಮಿಕರ ಸಬಲೀಕರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದರು.

**ಸೌಲಭ್ಯಗಳಿಗೆ ಆದ್ಯತೆ**

ಪೌರ ಕಾರ್ಮಿಕರಿಗೆ ಸಂಕಷ್ಟ ಭತ್ಯೆ, ಸಮವಸ್ತ್ರ, ಗೃಹ ಭಾಗ್ಯ ಯೋಜನೆಯಡಿ ನಿವೇಶನ, ಇಎಸ್‌ಐ, ಪಿಎಫ್, ಎನ್‌ಪಿಎಸ್ ಕಾರ್ಡ್, ಆರೋಗ್ಯ ತಪಾಸಣೆ, ಸುರಕ್ಷತಾ ಪರಿಕರ ಹಾಗು ವಿಮೆ ಸೇರಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.

ಪೌರ ಕಾರ್ಮಿಕರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಯಾವ ಕಾರಣಕ್ಕೂ ಸುರಕ್ಷತೆಯಲ್ಲಿ ರಾಜಿ ಮಾಡಿಕೊಳ್ಳಬಾರದು. ಮಾದಕ ವ್ಯಸನಗಳಿಂದ ದೂರವಿದ್ದು, ಶಿಸ್ತು ಮತ್ತು ಗೌರವಯುತವಾಗಿ ಬದುಕಬೇಕು. ಪ್ರತಿಯೊಬ್ಬರಿಗೂ ಉತ್ತಮ ಬದುಕು ಕಟ್ಟಿಕೊಳ್ಳುವ ಅರ್ಹತೆ ಇದೆ. ಪೌರ ಕಾರ್ಮಿಕರಿಗೆ ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸಿ ಕೊಡಬೇಕು. ವಸತಿ ರಹಿತರ ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಸೌಲಭ್ಯಗಳನ್ನು ಒದಗಿಸುವಾಗ ಪೌರ ಕಾರ್ಮಿಕರಿಗೆ ಆದ್ಯತೆ ನೀಡಲಾಗುವುದೆಂದು ಭರವಸೆ ನೀಡಿದರು.

» ನಾಲ್ಕನೇ ಪುಟದಲ್ಲಿ

## ಮಹಿಳಾ ನೌಕರರಿಗೆ ಸಂಘಟನಾ ಜವಾಬ್ದಾರಿ ನೀಡಲು ಬೈಲಾ

### ಸದುಪಯೋಗ ಪಡಿಸಿಕೊಳ್ಳಲು ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಷಡಾಕ್ಷರಿ ಕರೆ

• ಪ್ರಜೋದಯ ವರದಿ

**ಹಾಸನ:** ಸರ್ಕಾರಿ ನೌಕರರ ಸಂಘಕ್ಕೆ ಚುನಾವಣೆ ಮೂಲಕ ಮಹಿಳೆಯರು ಆಯ್ಕೆಯಾಗಲು ಸಾಧ್ಯವಾಗದ ಸಂದರ್ಭದಲ್ಲಿಯೂ ಪ್ರತಿ ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ಕನಿಷ್ಠ 20 ಮಂದಿ ಸಕ್ರಿಯ ಮಹಿಳಾ ಪ್ರತಿನಿಧಿಗಳನ್ನು ಗುರುತಿಸಿ ಅವರಿಗೆ ಸಂಘಟನಾ ಜವಾಬ್ದಾರಿ ನೀಡುವಂತೆ ಬೈಲಾ ರೂಪಿಸಲಾಗಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರು ತಿಳಿಸಿದರು.

ನಗರದ ಹಾಸನಾಂಬ ಕಲಾಭವನದಲ್ಲಿ ಬುಧವಾರ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ಜಿಲ್ಲಾ ಘಟಕದ ಉದ್ಘಾಟನೆ, ನೂತನ ಪದಾಧಿಕಾರಿಗಳ ಪದಗ್ರಹಣ, ಕಾನೂನು ಜಾಗೃತಿ ಹಾಗು ಆರೋಗ್ಯ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ನೌಕರರ ಸಂಘದಲ್ಲಿ ಮಹಿಳೆಯರಿಗೆ ಅವಕಾಶ ನೀಡಲಾಗುತ್ತಿಲ್ಲವೆಂಬ ಆರೋಪ ಸರಿಯಲ್ಲ. ಮಹಿಳೆಯರಿಗೆ ಸಂಘಟನೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದನ್ನು ಸದುಪ ಯೋಗಪಡಿಸಿಕೊಂಡು ಮುಂಚೂಣಿಗೆ ಬರಬೇಕೆಂದರು.



ಮಹಿಳೆಯರು ತಮ್ಮ ಸಾಮರ್ಥ್ಯ, ನಾಯಕತ್ವ ಹಾಗು ಸಾಮಾಜಿಕ ಕಾಳಜಿಯನ್ನು ಮನೆ ಮತ್ತು ಕಚೇರಿಗೆ ಮಾತ್ರ ಸೀಮಿತಗೊಳಿಸಿಕೊಳ್ಳಬಾರದು. ಸಂಘಟನೆಯ ಸಾಮಾಜಿಕ ಹಾಗು ಸಾರ್ವಜನಿಕ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾದಾಗ ಮಾತ್ರ ಸಂಘಟನೆ ಮತ್ತಷ್ಟು ಬಲಿಷ್ಠವಾಗಲಿದೆ.

» ನಾಲ್ಕನೇ ಪುಟದಲ್ಲಿ

## ಬಸ್ ಹತ್ತುವಾಗ ಬಿದ್ದು ಪ್ರಯಾಣಿಕ ಸಾವು

**ಹೊಳೆನರಸೀಪುರ:** ಬಸ್ ಹತ್ತುವ ವೇಳೆ ಚಾಲಕ ಏಕಾಏಕಿ ಬಸ್ ಚಲಾಯಿಸಿದ್ದರಿಂದ ಆಯಾತಪ್ಪಿ ಕೆಳಗೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ಮೂಡಲಹಿಪ್ಪೆ ಗ್ರಾಮದ ಸುನೀಲ್ ಚಿಕಿತ್ಸೆಗೆ ಸ್ಪಂದಿಸದೆ ಮೃತ ಪಟ್ಟಿರುವ ಘಟನೆ ಪಟ್ಟಣದ ಅಂಬೇಡ್ಕರ್ ವೃತ್ತದ ಬಳಿ ನಡೆದಿದೆ.

ಸುನೀಲ್ ಬಸ್ ಹತ್ತುತ್ತಿದ್ದಾಗ ಬಸ್ ಏಕಾಏಕಿ ಮುಂದಕ್ಕೆ ಚಲಿಸಿದ್ದರಿಂದ ಆಯಾತಪ್ಪಿ ಕೆಳಗೆ ಬಿದ್ದಿದ್ದಾರೆ. ಗಾಯಗೊಂಡಿದ್ದ ಅವರನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ಕರೆದೊಯ್ಯುವಾಗ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಂತ್ಯಕ್ರಿಯೆಗೆ ತೆರಳಿದ್ದ ವೇಳೆ ಮನೆಗಳಿಗೆ ಕನ್ನ

**ಅರೇಹಳ್ಳಿ:** ಅಂತ್ಯಕ್ರಿಯೆಗಾಗಿ ಕುಟುಂಬ ಸಮೇತ ಮಂಗಳೂರಿಗೆ ತೆರಳಿದ್ದ ವೇಳೆ ಕಳ್ಳರು ಎರಡು ಮನೆಯ ಹಂಚು ತೆಗೆದು ಒಳನುಗ್ಗಿ 12.50 ಲ.ರೂ. ಮೌಲ್ಯದ ಚಿನ್ನಾಭರಣ -ನಗದು ಕಳವು ಮಾಡಿರುವ ಘಟನೆ ಬೇಲೂರು ತಾಲ್ಲೂಕಿನ ಅರೇಹಳ್ಳಿ ಪಟ್ಟಣದ ರಾಮನಗರದಲ್ಲಿ ನಡೆದಿದೆ.

ರಾಮನಗರದ ಮಂಜಪ್ಪ ಹಾಗು ಗವಿಯಪ್ಪ ಸಹೋದರರ ಮನೆಗಳಲ್ಲಿ ಕಳ್ಳತನ ನಡೆದಿದ್ದು, ಹಿರಿಯ ಸಹೋದರನ ಅಂತ್ಯಕ್ರಿಯೆಗಾಗಿ ಕುಟುಂಬದ ಸದಸ್ಯರೆಲ್ಲರೂ ಮಂಗಳವಾರ ಬೆಳಿಗ್ಗೆ ತೆರಳಿದ್ದರು. ಮನೆಯವರು ಇಲ್ಲದಿರುವುದನ್ನು ಗಮನಿಸಿದ ಕಳ್ಳರು, ಹಂಚು ತೆಗೆದು ಮನೆಗೆ ನುಗ್ಗಿ ಬೀರುಗಳಲ್ಲಿದ್ದ ಚಿನ್ನ-ಬೆಳ್ಳಿ ಆಭರಣ ಹಾಗು ನಗದು ದೋಚಿ ಪರಾರಿಯಾಗಿದ್ದಾರೆ.

ಸಂಜೆ ಶಾಲೆಯಿಂದ ಮನೆಗೆ ಮರಳಿದ ಬಾಲಕಿ, ಮನೆ ಬಾಗಿಲು ತೆರೆದಿರುವುದು ಗಮನಿಸಿ ಕುಟುಂಬದವರಿಗೆ ದೂರವಾಣಿ ಮೂಲಕ ಮಾಹಿತಿ ನೀಡಿದ್ದಾಳೆ. ವಾಪಾಸಾದ ಕುಟುಂಬಸ್ಥರು ಪರಿಶೀಲಿಸಿದಾಗ, ಮಂಜಪ್ಪ ಹಾಗು ಗವಿಯಪ್ಪ ಅವರ ಎರಡೂ ಮನೆಗಳಲ್ಲೂ ಕಳ್ಳತನ ನಡೆದಿರುವುದು ದೃಢಪಟ್ಟಿದೆ.

ಬೀರುಗಳಲ್ಲಿದ್ದ ಸುಮಾರು 10 ಲಕ್ಷ ರೂ. ಮೌಲ್ಯದ ಚಿನ್ನಬೆಳ್ಳಿ ಆಭರಣಗಳು ಹಾಗು 2.50 ಲಕ್ಷ ರೂ. ನಗದು ಕಳುವಾಗಿರುವುದು ಗೊತ್ತಾಗಿದೆ.

ಘಟನೆ ಕುರಿತು ಅರೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬೆರಳಚ್ಚು ಸೇರಿ ವಿವಿಧ ಸಾಕ್ಷ್ಯಗಳನ್ನು ಸಂಗ್ರಹಿಸಿರುವ ಪೊಲೀಸರು, ಕಳ್ಳರ ಪತ್ತೆಗೆ ತನಿಖೆ ಕೈಗೊಂಡಿದ್ದಾರೆ. ಪಟ್ಟಣದಲ್ಲಿ ಹಗಲು ಹೊತ್ತಿನಲ್ಲೇ ಮನೆಗಳ ಹಂಚು ತೆಗೆದು ಒಳನುಗ್ಗಿ ಕಳ್ಳತನ ನಡೆಸಿರುವ ಘಟನೆ ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಕೃತ್ಯ ಎಸಗಿರುವವರನ್ನು ಶೀಘ್ರ ಪತ್ತೆಹಚ್ಚಿ ಕಳುವಾಗಿರುವ ವಸ್ತುಗಳನ್ನು ವಶಪಡಿಸಿಕೊಳ್ಳಬೇಕೆಂದು ಸ್ಥಳೀಯರು ಪೊಲೀಸರನ್ನು ಒತ್ತಾಯಿಸಿದ್ದಾರೆ.

## ಕೊಲೆ ಅಪರಾಧಿಗೆ ಜೀವಾವಧಿ ಶಿಕ್ಷೆ

**ಹಾಸನ :** ಗ್ರಾಮದಲ್ಲಿ ಶಾಂತಿಗೆ ಭಂಗ ತರುವುದನ್ನು ಖಂಡಿಸಿ ಬುದ್ಧಿವಾದ ಹೇಳಿದ್ದಕ್ಕೆ ಊರಿನ ಹಿರಿಯನನ್ನೇ ಕೊಲೆ ಮಾಡಿದ್ದ ಅಪರಾಧಿಗೆ ಜಿಲ್ಲಾ ನ್ಯಾಯಾಲಯ ಜೀವಾವಧಿ ಶಿಕ್ಷೆ ಪ್ರಕಟಿಸಿದೆ.

ಬೇಲೂರು ತಾಲ್ಲೂಕು ವಡ್ಡರಹಳ್ಳಿ ಕೊಪ್ಪಲು ಗ್ರಾಮದ ಯಶವಂತ ಅಪರಾಧಿ. 2022ರ ಜ.15ರಂದು ಅದೇ ಗ್ರಾಮದ ಸೋಮಯ್ಯ'ರನ್ನು ಕೊಲೆ ಮಾಡಿದ್ದ. ಯಶವಂತ ಆಗಾಗ ಜನರೊಂದಿಗೆ ಜಗಳ ಮಾಡುತ್ತಿದ್ದ. ಪಂಚಾಯಿತಿ ವೇಳೆಸೋಮಯ್ಯ ಬುದ್ಧಿವಾದ ಹೇಳುತ್ತಿದ್ದರು. ಅಷ್ಟಕ್ಕೆ ದ್ವೇಷ ಸಾಧಿಸಿದ ಯಶವಂತ ಆ ದಿನ ಸಂಜೆ 7ರ ವೇಳೆಗೆ ಮತ್ತೆ ಸೋಮಯ್ಯಗೆ ಮುಖಾಮುಖಿಯಾಗಿ ಗಲಾಟೆ ಮಾಡಿದ್ದನಲ್ಲದೆ, ಕೊಡಲಿಯಿಂದ 4 ಬಾರಿ ಬಲವಾಗಿ ಹೊಡೆದಿದ್ದ. ಗಂಭೀರ ಗಾಯಗೊಂಡಿದ್ದ ಸೋಮಯ್ಯ ಮೃತಪಟ್ಟಿದ್ದರು.

ಪ್ರಕರಣದ ವಿಚಾರಣೆ ನಡೆಸಿದ 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಶವಂತಗೆ ಜೀವಾವಧಿ ಶಿಕ್ಷೆ ಹಾಗು 30 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದ್ದಾರೆ.

### 5 ಸಾವಿರ ಕಾರ್ಮಿಕರಿಂದ ಕೆಲಸ | ಬರದ ಮಧ್ಯೆ ಆದಾಯದ ಆಶಾಭಾವ

# ವಿಬಿ-ಜಿ ರಾಮ್ ಜಿ : 30 ಸಾವಿರ ಕಾಮಗಾರಿಗೆ ಜಿ.ಪಂ.ಅನುಮೋದನೆ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಗ್ರಾಮೀಣ ಉದ್ಯೋಗ ನೀತಿಯಲ್ಲಿ ಕ್ರಾಂತಿಕಾರಿ ಬದಲಾವಣೆಯೊಂದಿಗೆ ಅಸ್ತಿತ್ವ ಪಡೆದಿರುವ ವಿಬಿ-ಜಿ ರಾಮ್ ಜಿ ಯೋಜನೆ ಜು.1 ರಿಂದ ಜಿಲ್ಲಾದ್ಯಂತ ಅನುಷ್ಠಾನ ಗೊಂಡಿದ್ದು, ಈ ವರೆಗೆ 30 ಸಾವಿರ ಕಾಮಗಾರಿಗೆ ಅನುಮೋದನೆ ದೊರೆತಿದೆ.

ಜಿಲ್ಲೆಯ 236 ಗ್ರಾಮ ಪಂಚಾಯಿತಿ ಪೈಕಿ 233 ಗ್ರಾ.ಪಂ.ಗಳಲ್ಲಿ 318 ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಗ್ರಾಮಸ್ಥರ ಅಗತ್ಯಕ್ಕೆ ಅನುಗುಣವಾಗಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ. ಅನುಮೋದನೆ ಪಡೆದಿರುವ ಸುಮಾರು 30 ಸಾವಿರ ಕಾಮಗಾರಿ ಪೈಕಿ 5 ಸಾವಿರ ಕೆಲಸಗಳು ಈಗಾಗಲೇ ಆರಂಭವಾಗಿವೆ. ಒಟ್ಟಾರೆ ಶೇ.25ರಷ್ಟು ಕಾಮಗಾರಿ ಪ್ರಾರಂಭ ಗೊಂಡಿದೆ.

ಯೋಜನೆಯಡಿ ಉದ್ಯೋಗದ ದಿನಗಳನ್ನು 100 ರಿಂದ 125 ದಿನಗಳಿಗೆ ವಿಸ್ತರಿಸಲಾಗಿದ್ದು, ಬಡ ಕುಟುಂಬಗಳಿಗೆ ವರ್ಷಕ್ಕೆ ಸುಮಾರು 47,760 ರೂ. ಆದಾಯ ದೊರೆ ಯುವ ಅವಕಾಶ ಕಲ್ಪಿಸಲಾಗಿದೆ. ಗ್ರಾಮೀಣ ಸಂಪನ್ಮೂಲಗಳನ್ನು ಸಮ ರ್ಪಕವಾಗಿ ಬಳಸಿಕೊಂಡು ವೈಯಕ್ತಿಕ, ಸಮುದಾಯ ಹಾಗು ನಾಗರಿಕರಿಗೆ ಅಗತ್ಯವಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.



ಕಾಮಗಾರಿ ಅಗತ್ಯವಿರುವವರು ತಮ್ಮ ಗ್ರಾಮ ಪಂಚಾಯಿತಿಗೆ ತೆರಳಿ ಮನವಿ ಸಲ್ಲಿಸಬಹುದು. ಗ್ರಾಮ ಸಭೆಯಲ್ಲಿ ವಿಷಯವನ್ನು ಮಂಡಿಸಿ, ಅಗತ್ಯ ಕಾಮಗಾರಿಗಳ ಪ್ರಸ್ತಾವನೆಯನ್ನು ಜಿಲ್ಲಾ ಪಂಚಾಯಿತಿಗೆ ಕಳುಹಿಸಲಾಗುತ್ತದೆ. ಮೇಲ್ಮಟ್ಟದ ಅಧಿಕಾರಿಗಳು ಪರಾಮರ್ಶಿಸಿ ಅದಕ್ಕೆ ಅನುಮೋದನೆ ನೀಡುತ್ತಾರೆ. ಗ್ರಾಮೀಣ ಭಾಗದ ಜನರಿಗೆ ಇದು ಉತ್ತಮ ಉದ್ಯೋಗಾವಕಾಶವಾಗಿದ್ದು, ಅಗತ್ಯವಿರುವವರು ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ ಮನವಿ ಮಾಡಿದ್ದಾರೆ.

> **ಜುಲೈ 1 ರಿಂದ ಜಿಲ್ಲೆಯಲ್ಲಿ ವಿಬಿ-ಜಿ ರಾಮ್ ಜಿ ಯೋಜನೆ ಅನುಷ್ಠಾನಗೊಂಡಿದ್ದು, 30 ಸಾವಿರ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ. ಸದ್ಯ 5 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಕಾರ್ಮಿಕರು ಹಾಗು ಕಾಮಗಾರಿಗಳ ಸಂಖ್ಯೆ ಹೆಚ್ಚುತ್ತದೆ. ಆಸಕ್ತರು ಹತ್ತಿರದ ಗ್ರಾಮ ಪಂಚಾಯಿತಿ ಅಧಿಕಾರಿಗಳನ್ನು ಸಂಪರ್ಕಿಸಿ ಕೆಲಸದಲ್ಲಿ ತೊಡಗಿಸಿಕೊಳ್ಳಬಹುದು.**
> **-ಶುಭಂ ಶುಕ್ಲಾ, ಜಿ.ಪಂ. ಸಿಇಒ**



**ಯಾವ ರೀತಿಯ ಕಾಮಗಾರಿ**

ವಿಬಿ-ಜಿ ರಾಮ್‌ಜಿ ಯೋಜನೆಯ ಪ್ರಮುಖ ಉದ್ದೇಶ ಕೇವಲ ಉದ್ಯೋಗ ನೀಡುವುದಲ್ಲ. ಗ್ರಾಮಗಳಲ್ಲಿ ಶಾಶ್ವತ ಆಸ್ತಿಗಳು ಮತ್ತು ಮೂಲ ಸೌಕರ್ಯ ನಿರ್ಮಿಸುವುದು ಕೂಡ ಆಗಿದೆ. ಮುಖ್ಯವಾಗಿ ನೀರಿನ ಭದ್ರತೆ ಉದ್ದೇಶದಿಂದ ಕೆರೆ, ಜಲಸಂರಕ್ಷಣೆ, ನೀರು ಸಂಗ್ರಹಣೆ ಮತ್ತಿತರ ಕಾಮಗಾರಿ, ಗ್ರಾಮೀಣ ಮೂಲಸೌಕರ್ಯ ಹಿನ್ನಲೆಯಲ್ಲಿ ಅಗತ್ಯವಿರುವ ಮೂಲ ಸೌಕರ್ಯ ಕಾಮಗಾರಿ, ಜೀವನೋಪಾಯಕ್ಕೆ ಸಂಬಂಧಿಸಿದ ಮೂಲ ಸೌಕರ್ಯ ಹಾಗು ಹವಾಮಾನ ವೈಪರೀತ್ಯಗಳಿಂದ ರಕ್ಷಣೆ ನೀಡುವ ಕಾಮಗಾರಿಗನ್ನು ಕೈಗೊಳ್ಳಲಾಗುತ್ತದೆ.

**ನರೇಗಾ-ವಿಬಿ-ಜಿ ರಾಮ್ ಜಿ ವ್ಯತ್ಯಾಸವೇನು?**

ಭಾರತದ ಗ್ರಾಮೀಣ ಉದ್ಯೋಗ ನೀತಿಯಲ್ಲಿ ಮಹತ್ವದ ಬದಲಾವಣೆ ತರುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು 2005ರ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯನ್ನು ರದ್ದುಗೊಳಿಸಿ ಅದರ ಬದಲಿಗೆ ವಿಕಸಿತ ಭಾರತ ರೋಜಗಾರ್ ಮತ್ತು ಅಜೀವಿಕಾ ಮಿಷನ್ ಕಾಯ್ದೆ 2025 ಅನ್ನು ಜಾರಿಗೆ ತಂದಿದೆ. ಈ ಹಿಂದೆ ಇದ್ದ ಎಂಜಿನರೇಗಾ ಯೋಜನೆಯ ಬದಲು ವಿಬಿ-ಜಿ ರಾಮ್ ಜಿ ಯೋಜನೆ ಜಾರಿಗೆ ಬಂದಿದೆ. ಗ್ರಾಮೀಣ ಭಾಗದ ಆರ್ಥಿಕತೆಯನ್ನು ಬಲಪಡಿಸುವ ಮತ್ತು 2047 ರ ವೇಳೆಗೆ ವಿಕಸಿತ ಭಾರತ ನಿರ್ಮಾಣದ ಗುರಿಯನ್ನು ಹೊಂದಿದೆ.

**ಕಾರ್ಮಿಕರ ವೇತನ ಏರಿಕೆ**

ನರೇಗಾ ಅಡಿ 264 ಕಾಮಗಾರಿ ನಿಗದಿಪಡಿಸಿದ್ದರೆ ನೂತನ ಯೋಜನೆ 318 ಕೆಲಸಗಳನ್ನು ಹೊಂದಿದೆ. ಕಾರ್ಮಿಕರಿಗೆ 360 ರೂ. ನೀಡುತ್ತಿದ್ದ ವೇತನವನ್ನು 382 ರೂ.ಗೆ ಹೆಚ್ಚಿಸಲಾಗಿದೆ. ಮಾನವ ದಿನಗಳನ್ನು 100 ರಿಂದ 125 ದಿನಕ್ಕೆ ವಿಸ್ತರಿಸಲಾಗಿದೆ. ಒಬ್ಬ ವ್ಯಕ್ತಿ 47,760 ರೂ. ಆದಾಯ ಗಳಿಸಬಹುದು. ಪ್ರಸ್ತುತ ದಿನಗಳಲ್ಲಿ ಬರಗಾಲ ಹೆಚ್ಚಿರುವ ಹಿನ್ನಲೆಯಲ್ಲಿ ಗ್ರಾಮೀಣ ಭಾಗದಲ್ಲಿ ಕೃಷಿ ಚಟುವಟಿಕೆಗಳು ಬಂದ್ ಆಗಿವೆ. ನಿರುದ್ಯೋಗ ಸಮಸ್ಯೆ ಕಾಡುತ್ತಿರುವ ಮಧ್ಯೆ ವಿಬಿ-ಜಿ ರಾಮ್ ಜಿ ಉದ್ಯೋಗದ ಆಶಾಭಾವ ಮೂಡಿಸಿದೆ.

## ಸೈಕಲ್‌ಗೆ ಲಾರಿ ಡಿಕ್ಕಿ: ಬಾಲಕ ಸಾವು

• ಪ್ರಜೋದಯ ವರದಿ

**ಹಾಸನ:** ಸೈಕಲ್‌ಗೆ ಲಾರಿ ಡಿಕ್ಕಿ ಹೊಡೆದಾಗ ಲಾರಿಯ ಚಕ್ರಕ್ಕೆ ಸಿಲುಕಿ ಬಾಲಕ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬಿಟ್ಟಗೌಡನಹಳ್ಳಿ ಬೈಪಾಸ್ ರಸ್ತೆಯಲ್ಲಿ ನಡೆದಿದೆ. ಶಾಂತಿಗ್ರಾಮ ಹೋಬಳಿ ಬಸ್ತಿಹಳ್ಳಿ ಗ್ರಾಮದ ಪುಟ್ಟಸ್ವಾಮಿ ಅವರ ಪುತ್ರ ಪಂಕಜ್ ಮೃತ ಬಾಲಕ.

ಪಂಕಜ್ ಸೈಕಲ್‌ನಲ್ಲಿ ಬಿಟ್ಟಗೌಡನಹಳ್ಳಿ ಬೈಪಾಸ್ ರಸ್ತೆಯಲ್ಲಿ ತೆರಳುತ್ತಿದ್ದಾಗ, ಕೆಎ-46-5852 ಸಂಖ್ಯೆಯ ಲಾರಿ ಬೈಪಾಸ್ ರಸ್ತೆಯಿಂದ ಗೊರೂರು ರಸ್ತೆಗೆ ತಿರುಗಿದೆ. ಈ ವೇಳೆ ಲಾರಿ ಚಾಲಕ ಅಜಾಗರೂಕತೆಯಿಂದ ವಾಹನ ಚಲಾಯಿಸಿ, ರಸ್ತೆಯ ಎಡಬದಿಯಲ್ಲಿ ಸೈಕಲ್‌ನಲ್ಲಿ ಮುಂದೆ ಸಾಗುತ್ತಿದ್ದ ಪಂಕಜ್‌ಗೆ ಡಿಕ್ಕಿ ಹೊಡೆದಿದ್ದಾನೆ. ಡಿಕ್ಕಿಯ ರಭಸಕ್ಕೆ ಪಂಕಜ್ ಲಾರಿಯ ಚಕ್ರದಡಿ ಸಿಲುಕಿದ್ದು, ಮುಂಭಾಗದ ಚಕ್ರ ಆತನ ಮೇಲೆ ಹರಿದು ತೀವ್ರ ಗಾಯಗೊಂಡಿದ್ದಾನೆ. ಗಾಯಗೊಂಡ ಬಾಲಕನನ್ನು ಹಿಮ್ಸ್‌ಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ. ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪರಿಹಾರ ದಾನವಲ್ಲ ಹೊಣೆಗಾರಿಕೆ ಎಂದ ನೇಪಾಳ

## ಪ್ರವಾಹಕ್ಕೆ ಹಸಿರು ಮನೆ ಅನಿಲ ಹೊರಸೂಸುವಿಕೆಯೇ ಕಾರಣ | ಭಾರತ, ಚೀನಾದತ್ತ ಬೊಟ್ಟು

• ಪ್ರಜೋದಯ ವರದಿ



**ಕಠ್ಮಂಡು:** ಭೀಕರ ಪ್ರವಾಹ ಮತ್ತು ಭೂಕುಸಿತದಿಂದ ತತ್ತರಿಸಿರುವ ನೇಪಾಳ, ಹವಾಮಾನ ಬದಲಾವಣೆಗೆ ಕಾರಣವಾಗುತ್ತಿರುವ ಪ್ರಮುಖ ಹಸಿರು ಮನೆ ಅನಿಲ ಹೊರಸೂಸುವ ರಾಷ್ಟ್ರಗ ಳಾದ ಭಾರತ, ಚೀನಾ ಮತ್ತು ಅಮೇರಿಕಾಗೆ ಪರಿಹಾರ ನೀಡುವಂತೆ ಆಗ್ರಹಿಸಿದೆ.

ಜಾಗತಿಕ ಹೊರಸೂಸುವಿಕೆಯಲ್ಲಿ ದೊಡ್ಡ ಪಾಲು ಹೊಂದಿರುವ ರಾಷ್ಟ್ರಗಳು, ಹವಾಮಾನ ಬದಲಾವಣೆಯಿಂದ ತೀವ್ರ ನಷ್ಟ ಅನುಭವಿಸುತ್ತಿರುವ ದೇಶಗಳ ಹೊಣೆಗಾರಿಕೆಯನ್ನು ಹಂಚಿ ಕೊಳ್ಳಬೇಕೆಂದು ಅದು ಪ್ರತಿಪಾದಿಸಿದೆ.

ಇತ್ತೀಚೆಗೆ ಸಂಭವಿಸಿದ ಭೀಕರ ಪ್ರವಾಹ ಮತ್ತು ಭೂಕುಸಿತದಲ್ಲಿ 1,000ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಸಾವಿರಾರು ಜನರು ನಾಪತ್ತೆಯಾಗಿದ್ದಾರೆ. ವ್ಯಾಪಕ ಹಾನಿ ಸಂಭವಿಸಿರುವ ಹಿನ್ನಲೆಯಲ್ಲಿ ಮನೆಗಳು, ರಸ್ತೆ, ಸೇತುವೆ ಸೇರಿ ಮೂಲಸೌಕರ್ಯಗಳ ಪುನರ್ ನಿರ್ಮಾಣಕ್ಕೆ ಕೋಟ್ಯಾಂತರ ಡಾಲರ್ ಅಗತ್ಯವಾಗುವ ಸಾಧ್ಯತೆ ಇದೆ. ಈ ಹಿನ್ನಲೆಯಲ್ಲಿ ಅಂತಾರಾಷ್ಟ್ರೀಯ ಹವಾಮಾನ ಹಣಕಾಸು ನೆರವಿಗಾಗಿ ನೇಪಾಳ ತನ್ನ ಪ್ರಯತ್ನವನ್ನು ಮತ್ತಷ್ಟು ಚುರುಕುಗೊಳಿಸಿದೆ.

ಏತನ್ಮಧ್ಯೆ ನೇಪಾಳದ ವಿದೇಶಾಂಗ ಸಚಿವ ಶಿಶಿರ್ ಖನಾಲ್, ಹವಾಮಾನ ಬಿಕ್ಕಟ್ಟಿಗೆ ನೇಪಾಳದ ಕೊಡುಗೆ ತುಲನಾತ್ಮಕವಾಗಿ ಅತ್ಯಲ್ಪವಾಗಿದ್ದರೂ ಅದರ ಪರಿಣಾಮಗಳಿಂದ ಉಂಟಾಗುವ ಆರ್ಥಿಕ ಹೊರೆಯನ್ನು ದೇಶವೇ ಸಂಪೂರ್ಣವಾಗಿ ಭರಿಸಬೇಕೆಂದು ನಿರೀಕ್ಷಿಸುವುದುಸರಿಯಲ್ಲವೆಂದಿದ್ದಾರೆ.

'ಇದು ದಾನವಲ್ಲ' ಎಂದು ಹೇಳಿರುವ ಖನಾಲ್, ಪ್ರಮುಖ ಮಾಲಿನ್ಯಕಾರ ರಾಷ್ಟ್ರಗಳು ಹವಾಮಾನ ದುರಂತಗಳಿಂದ ಬಾಧಿತ ದೇಶಗಳಿಗೆ ನೆರವು ನೀಡುವುದು ನೈತಿಕ ಹಾಗು ಕಾನೂನು ಬದ್ಧ ಹೊಣೆಗಾರಿಕೆ ಎಂದು ಪ್ರತಿಪಾದಿಸಿದ್ದಾರೆ.

ನಾವು ನಮ್ಮ ರಾಜತಾಂತ್ರಿಕ ಚೌಕಟ್ಟನ್ನು ನೆರವಿನಿಂದ ನ್ಯಾಯ ಮತ್ತು ಪರಿಹಾರದತ್ತ ಬದಲಾಯಿಸುತ್ತಿದ್ದೇವೆ. ಇದು ದಾನದ ವಿಚಾರವಲ್ಲ. ಕಾನೂನು ಮತ್ತು ನೈತಿಕ ಹೊಣೆಗಾರಿಕೆಯ ಪ್ರಶ್ನೆ. ವಿಶ್ವದ ಅತಿ ಹೆಚ್ಚು ಹಸಿರುಮನೆ ಅನಿಲ ಹೊರಸೂಸುವ ಚೀನಾ, ಎರಡನೇ ಸ್ಥಾನದಲ್ಲಿರುವ ಅಮೇರಿಕಾ ಮತ್ತು ಮೂರನೇ ಸ್ಥಾನದಲ್ಲಿರುವ ಭಾರತವು ನೇಪಾಳದಂತಹ ಹವಾಮಾನ ಬದಲಾವಣೆಗೆ ಹೆಚ್ಚು ದುರ್ಬಲವಾಗಿರುವ ರಾಷ್ಟ್ರಗಳಿಗೆ ಪರಿಹಾರ ನೀಡುವಲ್ಲಿ ಐತಿಹಾಸಿಕ ಹೊಣೆಗಾರಿಕೆ ಹೊಂದಿವೆ ಎಂದು ಖನಾಲ್ ದಿ ಕಠ್ಮಂಡು ಪೋಸ್ಟ್‌ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ನೇಪಾಳದ ಈ ಬೇಡಿಕೆ, ಹವಾಮಾನ ಬದಲಾವಣೆಯಿಂದ ಉಂಟಾಗುವ ನಷ್ಟ ಮತ್ತು ಹಾನಿಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ವ್ಯವಸ್ಥೆಯೊಂದಿಗೆ ಸಂಪರ್ಕ ಹೊಂದಿದೆ. ಹವಾಮಾನ ಬದಲಾವಣೆಯಿಂದ ಉಂಟಾಗುವ ವಿನಾಶಕ್ಕೆ ಆರ್ಥಿಕ ನೆರವು ಪಡೆಯಲು ಅಭಿವೃದ್ಧಿಶೀಲ ಹಾಗು ದುರ್ಬಲ ರಾಷ್ಟ್ರಗಳಿಗೆ ಈ ವ್ಯವಸ್ಥೆ ನೆರವಾಗಲಿದೆ. ಇತ್ತೀಚಿನ ದುರಂತದ ಹಿನ್ನಲೆಯಲ್ಲಿ ನೇಪಾಳವು ನೆರವು ಕೋರಿ ಸಂಪರ್ಕಿಸಿದೆ.

ಹವಾಮಾನ ಬದಲಾವಣೆಯ ಪರಿಣಾಮದಿಂದ ನೇಪಾಳದಂತಹ ರಾಷ್ಟ್ರಗಳು ಅನುಭವಿಸುತ್ತಿರುವ ಅಸಮಾನ ಪ್ರಮಾಣದ ನಷ್ಟವನ್ನು ಇತ್ತೀಚಿನ ಪ್ರವಾಹಗಳು ಮತ್ತೊಮ್ಮೆ ತೋರಿಸಿವೆ. ಪ್ರವಾಹ, ಭೂಕುಸಿತ, ಹಿಮನದಿಗಳ ಕರಗುವಿಕೆ ಸೇರಿ ಹವಾಮಾನ ಸಂಬಂಧಿತ ಅಪಾಯಗಳು ಹಿಮಾಲಯ ಪ್ರದೇಶದ ಜನರ ಬದುಕಿಗೆ ದಿನದಿಂದ ದಿನಕ್ಕೆ ದೊಡ್ಡ ಬೆದರಿಕೆಯಾಗುತ್ತಿವೆ. ಇತ್ತೀಚಿನ ಪ್ರವಾಹದಿಂದ ಮನೆ, ರಸ್ತೆ, ಸೇತುವೆ ಸೇರಿ ಹಲವು ಮೂಲ ಸೌಕರ್ಯಗಳು ಹಾನಿ ಗೊಳಗಾಗಿವೆ. ಹಲವು ಪ್ರದೇಶಗಳಲ್ಲಿ ಜನರ ಜೀವನೋಪಾಯವೂ ಅಸ್ತವ್ಯಸ್ತಗೊಂಡಿದೆ. ಪುನರ್ ನಿರ್ಮಾಣಕ್ಕೆ ಬಿಲಿಯನ್ ಗಟ್ಟಲೆ ಡಾಲರ್ ವೆಚ್ಚವಾಗಬಹುದೆಂದು ನೇಪಾಳ ಅಂದಾಜಿಸಿದೆ.

ನೇಪಾಳದ ಪರಿಹಾರ ಬೇಡಿಕೆ ಅದರ ವಿಶಾಲವಾದ ಹವಾಮಾನ ನ್ಯಾಯ ಅಭಿಯಾನದ ಭಾಗವಾಗಿದೆ. ಕಾರ್ಬನ್ ಆಧಾರಿತ ಆರ್ಥಿಕ ಅಭಿವೃದ್ಧಿಯಿಂದ ಹೆಚ್ಚಿನ ಲಾಭ ಪಡೆದ ರಾಷ್ಟ್ರಗಳು, ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಎದುರಿಸುತ್ತಿರುವ ದೇಶಗಳಿಗೆ ಹೆಚ್ಚಿನ ಆರ್ಥಿಕ ನೆರವು ನೀಡಬೇಕೆಂದು ನೇಪಾಳ ಹಲವು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಒತ್ತಾಯಿಸುತ್ತಲೇ ಬಂದಿದೆ.

ಭಾರತ ಮತ್ತು ಚೀನಾ ನೇಪಾಳದ ನೆರೆಯ ರಾಷ್ಟ್ರಗಳಾಗಿರುವುದರ ಜೊತೆಗೆ, ಅದರ ಆರ್ಥಿಕತೆಯ ಮೇಲೂ ಪ್ರಮುಖ ಪ್ರಭಾವ ಹೊಂದಿರುವುದರಿಂದ, ಈ ಬೇಡಿಕೆ ರಾಜತಾಂತ್ರಿಕವಾಗಿ ಸೂಕ್ಷ್ಮ ವಿಚಾರವಾಗಿದೆ. ಇದೇ ವೇಳೆ, ಜಾಗತಿಕ ತಾಪಮಾನ ಏರಿಕೆಗೆ ಅತ್ಯಂತ ದುರ್ಬಲವಾಗಿರುವ ಪ್ರದೇಶಗಳಲ್ಲಿ ಹಿಮಾಲಯವೂ ಒಂದು ಎಂಬುದನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತೆ ಕಠ್ಮಂಡು ಒತ್ತಾಯಿಸುತ್ತಿದೆ.

# ಪರಿಸರ ಸ್ನೇಹಿ ಗಣೇಶ ಚತುರ್ಥಿ: ಪಿಒಪಿ ಮೂರ್ತಿ ನಿಷೇಧ

- ತಯಾರಿಕೆ, ಮಾರಾಟ, ಪ್ರತಿಷ್ಠಾಪನೆಗೂ ನಿರ್ಬಂಧ
- ಉಲ್ಲಂಘಿಸಿದರೆ ದಂಡದ ಜೊತೆ ಜೈಲು ಶಿಕ್ಷೆ

• ಪ್ರಜೋದಯ ವರದಿ



**ಹಾಸನ:** ಪರಿಸರ ಸ್ನೇಹಿಯಾಗಿ ಗೌರಿ-ಗಣೇಶ ಹಬ್ಬ ಆಚರಿಸುವ ಉದ್ದೇಶದಿಂದ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಹಾಗು ರಾಸಾಯನಿಕ ವಸ್ತುಗಳಿಂದ ಗಣೇಶ ಮೂರ್ತಿಗಳ ತಯಾರಿಕೆ, ಸಂಗ್ರಹಣೆ, ಮಾರಾಟ, ವಿಸರ್ಜನೆ ಹಾಗು ಸಾರ್ವಜನಿಕ ಪ್ರತಿಷ್ಠಾಪನೆಯನ್ನೂ ನಿಷೇಧಿಸಲಾಗಿದೆ.

ವಿಷಕಾರಿ ಅಥವಾ ಭಾರೀ ಲೋಹಗಳನ್ನು ಒಳಗೊಂಡಿರುವ ರಾಸಾಯನಿಕ ಬಣ್ಣಗಳಿಂದ ತಯಾರಿಸಲಾದ ಗಣೇಶ ಮೂರ್ತಿಗಳ ಮಾರಾಟಕ್ಕೂ ಸಂಪೂರ್ಣ ನಿಷೇಧವಿದೆ. ಸಾರ್ವಜನಿಕರು ಹಾಗು ಗಣೇಶೋತ್ಸವ ಸಮಿತಿಗಳು ನೈಸರ್ಗಿಕ ಮಣ್ಣು ಮತ್ತು ಪರಿಸರ ಸ್ನೇಹಿ ವಸ್ತುಗಳಿಂದ ತಯಾರಿಸಿದ ಮೂರ್ತಿಗಳನ್ನೇ ಬಳಸಬೇಕಿದೆ.

ಪಿಒಪಿ ಹಾಗು ರಾಸಾಯನಿಕ ಬಣ್ಣಗಳಿಂದ ತಯಾರಿಸಿದ ಮೂರ್ತಿಗಳನ್ನು ಕೆರೆ, ಬಾವಿ, ನದಿ, ಕಾಲುವೆ, ಜಲಾಶಯ ಸೇರಿ ಯಾವುದೇ ನೈಸರ್ಗಿಕ ಜಲಮೂಲಗಳಲ್ಲಿ ವಿಸರ್ಜಿಸುವುದರಿಂದ ನೀರಿನ ಭೌತಿಕ ಮತ್ತು ರಾಸಾಯನಿಕ ಗುಣಗಳಲ್ಲಿ ಬದಲಾವಣೆಯಾಗುತ್ತದೆ. ಅದರಿಂದ ಪರಿ ಸರದ ಮೇಲೆ ದುಷ್ಪರಿಣಾಮ ಉಂಟಾಗುವುದರ ಜೊತೆಗೆ ಪ್ರಾಣಿ, ಪಕ್ಷಿ ಹಾಗು ಜಲಚರಗಳ ಜೀವಕ್ಕೂ ಅಪಾಯ ಉಂಟಾಗುವ ಸಾಧ್ಯತೆ ಇದೆ. ಸಾರ್ವಜನಿಕರ ಆರೋಗ್ಯದ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಇಂತಹ ಮೂರ್ತಿಗಳ ಬಳಕೆಗೆ ನಿರ್ಬಂಧ ವಿಧಿಸಲಾಗಿದೆಂದು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಈ ಕುರಿತು ಅಧಿಸೂಚನೆ ಹೊರಡಿಸಿದ್ದು, ಪಿಒಪಿ ಹಾಗು ಬಣ್ಣ ಲೇಪಿತ ಮೂರ್ತಿಗಳನ್ನು ರಾಜ್ಯದ ಯಾವುದೇ ಕೆರೆ ಹಾಗು ಇತರೆ ಜಲ ಮೂಲಗಳಲ್ಲಿ ವಿಸರ್ಜಿಸುವುದನ್ನು ನಿಷೇಧಿಸಿದೆ.

**ಉಲ್ಲಂಘಿಸಿದರೆ ಕ್ರಮ**

ನಿಷೇಧಿತ ಗಣೇಶ ಮೂರ್ತಿಗಳ ಉತ್ಪಾದನೆ ಅಥವಾ ಮಾರಾಟ ಕಂಡುಬಂದಲ್ಲಿ ಸ್ಥಳೀಯ ಸಂಸ್ಥೆಗಳ ಮೂಲಕ ಕಾನೂನು ಕ್ರಮ ಕೈಗೊಳ್ಳಲಾಗುವುದು. ಜಲ (ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕಾಯ್ದೆ 1974ರ ಕಲಂ 33(ಎ) ಅಡಿಯಲ್ಲಿ ಉತ್ಪಾದನಾ ಘಟಕಗಳನ್ನು ಮುಚ್ಚುವ ಹಾಗು ಮುಟ್ಟುಗೋಲು ಹಾಕಿಕೊಳ್ಳುವ ಅವಕಾಶವಿದೆ.

ಅಂತಹ ಮೂರ್ತಿಗಳನ್ನು ಜಲಮೂಲಗಳಲ್ಲಿ ವಿಸರ್ಜಿಸುವುದು ಕಾಯ್ದೆಯ ಕಲಂ 24ರ ಉಲ್ಲಂಘನೆಯಾಗುತ್ತದೆ. ತಪ್ಪಿತಸ್ಥರಿಗೆ ದಂಡದ ಜೊತೆಗೆ ಕನಿಷ್ಠ ಒಂದೂವರೆ ವರ್ಷ ದಿಂದ ಗರಿಷ್ಠ ಆರು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ. ಪರಿಸರ (ಸಂರಕ್ಷಣೆ) ಕಾಯ್ದೆ 1986 ರಡಿಯಲ್ಲಿಯೂ ಕ್ರಮ ಕೈಗೊಳ್ಳಬಹುದಾಗಿದ್ದು, ಕಲಂ 5ರ ಅನ್ವಯ ಉತ್ಪಾದನಾ ಘಟಕಗಳನ್ನು ಮುಚ್ಚುವ ಹಾಗೂ ಮುಟ್ಟುಗೋಲು ಹಾಕಿಕೊಳ್ಳುವ ಅವಕಾಶವಿದೆ. ಹೀಗಾಗಿ ಗಣೇಶ ಮೂರ್ತಿ ತಯಾರಕರು, ಮಾರಾಟಗಾರರು ಹಾಗೂ ಗಣೇಶೋತ್ಸವ ಸಮಿತಿಗಳು ಸರ್ಕಾರ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಹೊರಡಿಸಿರುವ ನಿರ್ದೇಶನಗ ಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಅಧಿಕಾರಿಗಳು ತಿಳಿಸಿದ್ದಾರೆ.

### ಸೆ.7ರಂದು ಪರಿಸರ ಸ್ನೇಹಿ ಮ್ಯಾರಥಾನ್

ಗಣೇಶ ಹಬ್ಬದ ಹಿನ್ನಲೆ ಜಿಲ್ಲಾಡಳಿತದ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಾಸನ ಪ್ರಾದೇಶಿಕ ಕಚೇರಿ ವತಿಯಿಂದ ಸೆ.7ರಂದು ಪರಿಸರ ಸ್ನೇಹಿ ಮ್ಯಾರಥಾನ್ ಆಯೋಜಿಸಲಾಗಿದೆ. ಬೆಳಿಗ್ಗೆ 7 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಿಂದ ಜಿಲ್ಲಾ ಕ್ರೀಡಾಂಗಣದವರೆಗೆ ಮ್ಯಾರಥಾನ್ ನಡೆಯಲಿದೆ.

### ಮಣ್ಣಿನ ಗಣೇಶ ಮೂರ್ತಿ ಸ್ಪರ್ಧೆ

ಅದೇ ದಿನ ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಮಣ್ಣಿನ ಗಣೇಶ ಮೂರ್ತಿ ತಯಾ ರಿಸುವ ಸ್ಪರ್ಧೆ ನಡೆಯಲಿದೆ. ಉತ್ತಮ ಮೂರ್ತಿ ತಯಾರಿಸಿದವರಿಗೆ ಪ್ರಥಮ ಬಹುಮಾನ 5,000, ದ್ವಿತೀಯ ಬಹುಮಾನ 3,000 ಹಾಗು ತೃತೀಯ ಬಹುಮಾನ 2,000 ನೀಡಲಾಗುವುದು. 10 ಮಂದಿಗೆ ಸಮಾಧಾನಕರ ಬಹುಮಾನ ನೀಡಲಾಗುವುದೆಂದು ಅಧಿಕಾರಿಗಳು ತಿಳಿಸಿದ್ದಾರೆ.

# ಪೌರ ಕಾರ್ಮಿಕರು ಯೋಧರಷ್ಟೇ ಶ್ರೇಷ್ಟರು

» ಮೊದಲನೇ ಪುಟದಿಂದ

ನಿವೇಶನ, ಮನೆ ನಿರ್ಮಾಣಕ್ಕೆ ನೆರವು ನೀಡಿ

ಪೌರ ಕಾರ್ಮಿಕರ ಪರವಾಗಿ ಮುಖಂಡ ಶಂಕರ್ ರಾಜ್ ಅವರು ಮಾತನಾಡಿ, ನಗರದಲ್ಲಿ 41 ಕಾರ್ಮಿಕರು ವೈಯಕ್ತಿಕ ವಸತಿ ಯೋಜನೆಯಡಿ ಕನಿಷ್ಟ 3 ರಿಂದ 4 ಲ. ರೂ. ವೆಚ್ಚ ಮಾಡಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಆದರೆ ಅಗತ್ಯ ಮೂಲ ಸೌಕರ್ಯಗಳ ಕೊರತೆಯಿಂದ ತೊಂದರೆ ಅನುಭವಿಸುತ್ತಿದ್ದಾರೆ. ಎರಡನೇ ಹಂತದ ಪೌರ ಕಾರ್ಮಿಕರಿಗೆ ಇನ್ನೂ ನಿವೇಶನ ನೀಡಿಲ್ಲ. ತಾಲ್ಲೂಕುಗಳಲ್ಲಿಯೂ ನಿವೇಶನ ನೀಡುವ ಕಾರ್ಯವಾಗಿಲ್ಲ. ಅಧಿಕಾರಿಗಳು ಮನಸ್ಸು ಮಾಡಿದರೆ ಒಂದು ವಾರದಲ್ಲೇ ನಿವೇಶನ ಒದಗಿಸಬಹುದು. ಪೌರ ಕಾರ್ಮಿಕರ ವಿಚಾರದಲ್ಲಿರಾಜಕಾರಣ ಬೆರೆಸಬಾರದೆಂದರು.

ಸಕಲೇಶಪುರದಲ್ಲಿ 65 ಮನೆಗಳು ಮಂಜೂರಾಗಿದ್ದು, ಸುಮಾರು 35 ಲ. ರೂ. ಅನುದಾನದ ಪೈಕಿ ಫಲಾನುಭವಿಗಳು 8 ಲ. ರೂ. ಈಗಾಗಲೇ ಪಾವತಿಸಿದ್ದಾರೆ. ಉಳಿದ ಅನುದಾನ ಬಿಡುಗಡೆ ಯಾಗಿ ಕಾಮಗಾರಿ ಪೂರ್ಣಗೊಂಡರೆ ಕಾರ್ಮಿಕರು ಮನೆಗಳಲ್ಲಿ ವಾಸಿಸಲು ಸಾಧ್ಯವಾಗಲಿದೆ. ಸದ್ಯ ಹಲವರು ಗುಡಿಸಲುಗಳಲ್ಲಿ ವಾಸಿಸುತ್ತಿದ್ದು, ತೀವ್ರ ತೊಂದರೆ ಅನುಭವಿಸುತ್ತಿದ್ದಾರೆಂದು ಅಧಿಕಾರಿಗಳ ಗಮನ ಸೆಳೆದರು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಚಂದ್ರಶೇಖರ್, ಹಿಮ್ಸ್ ನಿರ್ದೇಶಕ ಡಾ|| ರಾಜಣ್ಣ, ನಗರಾಡಳಿತ ನಿರ್ದೇಶಕ ರುದ್ರಮುನಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪಿ.ದೂದಪೀರ್, ಮಹಾನಗರ ಪಾಲಿಕೆ ಪೌರಾಯುಕ್ತ ಆರ್. ಕೃಷ್ಣಮೂರ್ತಿ, ಅಧಿಕಾರಿಗಳು ಹಾಗು ಪೌರ ಕಾರ್ಮಿಕರು ಉಪಸ್ಥಿತರಿದ್ದರು.

### ಸೌಲಭ್ಯಕ್ಕಾಗಿ ಕಣ್ಣೀರು ಸುರಿಸಿದ ಕಾರ್ಮಿಕರು

ಜಿಲ್ಲಾಡಳಿತ ಇದೇ ಮೊದಲ ಬಾರಿಗೆ ಪೌರ ಕಾರ್ಮಿಕರ ಸಮಸ್ಯೆ ಆಲಿಸಲು ಮುಂದಾಗಿದೆ ಎಂದು ಸಂತಸ ವ್ಯಕ್ತಪಡಿಸಿದ ಪೌರ ಕಾರ್ಮಿಕರು ವೃತ್ತಿ ಜೀವನದಲ್ಲಿ ಎದುರಿಸುತ್ತಿರುವ ಅವಮಾನ, ಮೂಲಸೌಕರ್ಯ ಕೊರತೆ ನೆನೆದು ಕಣ್ಣೀರಿಟ್ಟರು.

ಜಿಲ್ಲಾಧಿಕಾರಿ ಅವರು ಎಲ್ಲರಿಗೂ ಘನತೆಯಿಂದ ಬದುಕುವ ಹಕ್ಕಿದೆ ಎನ್ನುವ ಮೂಲಕ ನಮ್ಮ ವೃತ್ತಿಗೆ ಬೆಲೆ ತಂದುಕೊಟ್ಟಿದ್ದಾರೆ. ಇದೇ ರೀತಿಯ ಮನೋಭಾವ ಎಲ್ಲರಲ್ಲೂ ಮೂಡಬೇಕು. ವಾಸಿಸಲು ಯೋಗ್ಯ ಸೂರಿಲ್ಲದೆ ಬದುಕುತ್ತಿದ್ದೇವೆ. ನಿವೃತ್ತಿ ವಯಸ್ಸಿಗೆ ಬಂದರೂ ಇನ್ನೂ ಗುಡಿಸಿಲಿನಲ್ಲೇ ಬದುಕು ನಡೆಸುತ್ತಿದ್ದೇವೆಂದು ಅರಸೀಕೆರೆಯ ಪೌರ ಕಾರ್ಮಿಕರು ಹೇಳಿದರು.

ಹಾಸನದ ಪೌರ ಕಾರ್ಮಿಕರು ಮಾತನಾಡಿ, ನಮಗೆ ಪಿಎಫ್, ಇಎಸ್ಐ ಸೌಲಭ್ಯವಿಲ್ಲ. ಎನ್‌ಪಿಎಸ್ ಕಾರ್ಡ್ ಇನ್ನೂ ಸಿಕ್ಕಿಲ್ಲ. ಆರೋಗ್ಯ ಸಮಸ್ಯೆಗಳು ಬಾಧಿಸುತ್ತಿದ್ದು ಸರ್ಕಾರದ ಯೋಜನೆಗಳು ಸಮರ್ಪಕವಾಗಿ ತಲುಪುವಂತೆ ಕ್ರಮ ವಹಿಸಬೇಕೆಂದು ಕೋರಿದರು.

ಎಲ್ಲರ ಮನವಿಯನ್ನು ಸಮಾಧಾನದಿಂದ ಆಲಿಸಿದ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಹಂತ ಹಂತವಾಗಿ ಸಮಸ್ಯೆಗೆ ಪರಿಹಾರ ಕಲ್ಪಿಸುವ ಭರವಸೆ ನೀಡಿದರು.

# ಬರಪೀಡಿತ ಪಟ್ಟಿಯಿಂದ ಬೇಲೂರು ಕಡೆಗಣನೆಗೆ ರೈತ ಸಂಘ ಆಕ್ರೋಶ

» ಮೊದಲನೇ ಪುಟದಿಂದ

ಎಳೆದು ತಂದು ಹೋರಾಟ ಮಾಡುತ್ತೇವೆಂದು ಎಚ್ಚರಿಕೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಜಿಲ್ಲೆಯಾದ್ಯಂತ ಬರ ಅಧ್ಯಯನ ನಡೆಸಿ ವಾಸ್ತವ ಸ್ಥಿತಿ ವೀಕ್ಷಿಸಿದರೂ 3 ತಾಲ್ಲೂಕುಗಳು ಬರ ಪಟ್ಟಿಗೆ ಸೇರದೆ ಇರುವುದು ಏಕೆ ಎಂದು ಪ್ರಶ್ನಿಸಿದರು.

ರೈತ ಸಂಘ ಹೋಬಳಿ ಅಧ್ಯಕ್ಷ ಎಲ್.ಈ.ಶಿವಪ್ಪ ಅವರು ಮಾತನಾಡಿ, ಜಿಲ್ಲೆಯಲ್ಲಿ 11,048 ರೈತರು 32 ಕೋ. ರೂ. ಬೆಳೆ ವಿಮೆ ಪಾವತಿಸಿದ್ದಾರೆ. ಬರಗಾಲದಿಂದ ಬೆಳೆ ನಷ್ಟವಾದರೂ ರೈತರಿಗೆ ಬಿಡಿಗಾಸು ಬಂದಿಲ್ಲ. ಸಂಸದ ಶ್ರೇಯಸ್ ಪಟೇಲ್ ಹೊಳೆನರಸೀಪುರ ಹಿತಕ್ಕಾಗಿ ಮಾತ್ರ ಶ್ರಮಿಸುತ್ತಿದ್ದಾರೆ. ಹಾಸನ ಲೋಕಸಭಾ ಕ್ಷೇತ್ರಕ್ಕೆ ಸದಸ್ಯನಾಗಿದ್ದೇನೆಂಬುದನ್ನು ಮರೆತಿ ದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಟಿ.ಬಿ.ಹಾಲಪ್ಪ ಅವರು ಮಾತನಾಡಿ, ಹಳೇಬೀಡು ಹೋಬಳಿಯಲ್ಲಿ ಮಳೆ ಕೊರತೆಯಾಗಿದೆ ಎಂಬುದಕ್ಕೆ ದಾಖಲೆ ಇದ್ದರೂ ಬೇಲೂರು ತಾಲ್ಲೂಕು ಬರಪ್ರದೇಶಕ್ಕೆ ಸೇರಿಲ್ಲ ಎಂದರು. ಉಪ ತಹಶೀಲ್ದಾರ್ ಭೋಜೇಂದ್ರಪ್ಪ ಮನವಿ ಸ್ವೀಕರಿಸಿದರು.

ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಪ್ರಕಾಶ್, ಹಾಸನ ತಾಲ್ಲೂಕು ಅಧ್ಯಕ್ಷ ಮುಂಜುನಾಥ ಮುಖಂಡ ರಾದ ಅಂದಾಲೆ ಪರಮೇಶ್, ರಾಜಗೆರೆ ಗಂಗಾಧರಪ್ಪ, ತಟ್ಟೆಹಳ್ಳಿ ಶಿವಕುಮಾರ್, ಶ್ರೀನಿವಾಸ, ಅಡುಗೆ ರಾಜು, ಮುನ್ನಾಬಾಯ್, ಕೆ.ಆರ್.ಮಹಾಲಕ್ಷ್ಮಿ ಮೊದಲಾದವರಿದ್ದರು.

# ಪಡಿತರ ಚೀಟಿಗಳ ಮಾನದಂಡ ಪರಿಷ್ಕರಣೆ: ಸಚಿವ ಅರ್ಷದ್

• ಪ್ರಜೋದಯ ವರದಿ



**ಮೈಸೂರು:** ಆದ್ಯತಾ ಪಡಿತರ ಚೀಟಿಗಳನ್ನು ಪಡೆಯಲು ಇರುವ ಮಾನದಂಡಗಳನ್ನು ಪರಿಷ್ಕರಿಸಲು ಚಿಂತನೆ ನಡೆದಿದೆ ಎಂದು ಆಹಾರ, ನಾಗರಿಕ ಸರಬರಾಜು ಹಾಗು ಗ್ರಾಹಕ ವ್ಯವಹಾರಗಳ ಸಚಿವ ರಿಜ್ವಾನ್ ಅರ್ಷದ್ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಇಲಾಖೆಗೆ ಸಂಬಂಧಿಸಿದ ಎಲ್ಲಾ ಗೋದಾಮು ಗಳಲ್ಲೂ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗುವುದು. ಎಲ್ಲಾ ಆಹಾರ ಧಾನ್ಯ ಸಾಗಣೆ ವಾಹನ ಗಳಿಗೆ ಜಿಪಿಎಸ್ ಸಾಧನ ಅಳವಡಿಸುವಂತೆ ಸೂಚಿಸಲಾಗಿದೆ. ಕೇಂದ್ರ ಕಚೇರಿಯಲ್ಲಿ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್ ಸ್ಥಾಪಿಸಿ ಅಲ್ಲಿಂದ ಎಲ್ಲವನ್ನೂ ನಿರ್ವಹಿಸಲಾಗುವುದೆಂದು ಮಾಹಿತಿ ನೀಡಿದರು.

ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲೂ ಇಪಿಒಎಸ್, ವಿದ್ಯುನ್ಮಾನ ತೂಕದ ಯಂತ್ರ ಮತ್ತು ಐಆರ್ ಐಎಸ್ ಸ್ಕ್ಯಾನರ್ ಅಳವಡಿಸಲಾಗುವುದು. ಮೊದಲಿಗೆ ಪ್ರಾಯೋಗಿಕವಾಗಿ ಚಿಕ್ಕ ಬಳ್ಳಾಪುರ ಹಾಗು ಚಿತ್ರದುರ್ಗ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿ ನಂತರ ರಾಜ್ಯದಾದ್ಯಂತ ವಿಸ್ತರಿಸಲಾಗುವುದೆಂದರು.

ಬಯೊಮೆಟ್ರಿಕ್ ಜೊತೆಗೆ ಒಟಿಪಿ ಪರಿಶೀಲನಾ ವ್ಯವಸ್ಥೆ ಅಳವಡಿಕೆಗೆ ಚಿಂತಿಸಲಾಗಿದೆ. ನ್ಯಾಯಬೆಲೆ ಅಂಗಡಿಗಳ ಮಾಲೀಕರು ಗೋದಾಮುಗಳಿಂದ ಆಹಾರ ಧಾನ್ಯ ಎತ್ತುವಳಿ ಮಾಡಿದ ನಂತರ ಫಲಾನುಭವಿಗಳಿಗೆ ಎಸ್ಎಂಎಸ್ ಮೂಲಕ ಮಾಹಿತಿ ನೀಡುವ ವ್ಯವಸ್ಥೆ ತರಲಾಗುವುದು. ಬೆಂಗಳೂರು ನಗರದಲ್ಲಿ ವಲಸೆ ಕಾರ್ಮಿಕರಿಗೆ ಪಡಿತರವನ್ನು ಸಮರ್ಪಕವಾಗಿ ವಿತರಿಸಲು ಅನ್ನ ಎಟಿಎಂ ಸ್ಥಾಪಿಸಲು ಚಿಂತನೆ ನಡೆದಿದೆ ಎಂದರು.

ನಗರದಲ್ಲಿ ಶೇ.50 ಹಾಗು ಗ್ರಾಮೀಣ ಪ್ರದೇಶದಲ್ಲಿ ಶೇ.75ರಷ್ಟು ಮಂದಿ ಆಹಾರ ಭದ್ರತಾ ಕಾಯ್ದೆ ವ್ಯಾಪ್ತಿಗೆ ಬರಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯಕ್ಕೆ ಜನಸಂಖ್ಯೆ ಆಧರಿಸಿ ಪಡಿತರ ಹಂಚಿಕೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಪಡಿತರ ಕಾಳಸಂತೆಯಲ್ಲಿ ಮಾರಾಟ ಆಗದಂತೆ ನಿಗಾ ವಹಿಸಲಾಗುವುದು. ಸುಧಾರಣೆ ಮೂಲಕ, ಕಡಿಮೆ ಸಮಯದಲ್ಲೇ ದೊಡ್ಡ ಬದಲಾವಣೆ ತರಲು ಯೋಜಿಸಲಾಗಿದೆ ಎಂದರು.

ಸರ್ವರ್ ಸಮಸ್ಯೆ ಬಗೆಹರಿಸಲು ವೈದ್ಯಕೀಯ ಚಿಕಿತ್ಸೆಯ ಕಾರಣಗಳಿಗಾಗಿ, ಮಾನದಂಡದ ಪ್ರಕಾರ ಇರುವವರಿಗೆ ತ್ವರಿತವಾಗಿ ಬಿಪಿಎಲ್ ಪಡಿತರ ಚೀಟಿ ವಿತರಿಸುವಂತೆ ಸೂಚಿಸಲಾಗಿದೆ. ಪಡಿತರ ವಿತರಣೆ ಸಮಯದಲ್ಲಿ ಉಂಟಾಗುತ್ತಿರುವ ಸರ್ವರ್ ಸಮಸ್ಯೆ ಬಗೆಹರಿಸಲು 3ನೇ ಏಜೆನ್ಸಿ ಸೇವೆ ಪಡೆಯಲಾಗುತ್ತಿದೆ. ನ್ಯಾಯಬೆಲೆ ಅಂಗಡಿಗಳಿಗೆ ಇಪಿಒಎಸ್‌ಗಾಗಿ ಪ್ರತ್ಯೇಕ ಸಿಮ್ ವಿತರಿಸಲಾಗುವುದು. ಆಗ ಸರ್ವರ್ ಸಮಸ್ಯೆ ಬಗೆಹರಿಸಬಹುದಾಗಿದೆ. ಸದ್ಯಕ್ಕೆ ಯಾವುದೇ ಪಡಿತರ ಚೀಟಿಗಳನ್ನು ರದ್ದುಪಡಿಸದಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಅನರ್ಹರಿದ್ದರೆ ಹೊರ ಹಾಕಬೇಕಿದೆ ಹಾಗು ಅರ್ಹರನ್ನು ಸೇರ್ಪಡೆ ಮಾಡಬೇಕಾಗಿದೆ ಎಂದರು.

### ಇಂದಿರಾ ಕಿಟ್ ಮರು ಪರಿಶೀಲನೆ

ನ್ಯಾಯಬೆಲೆ ಅಂಗಡಿಗಳ ಮೂಲಕ ತೊಗರಿ ಬೇಳೆ, ಸೂರ್ಯಕಾಂತಿ ಎಣ್ಣೆ, ಉಪ್ಪು, ಸಕ್ಕರೆ ಒಳಗೊಂಡ ಇಂದಿರಾ ಕಿಟ್ ವಿತರಿಸಲು ಕರೆಯಲಾಗಿದ್ದ ಟೆಂಡರ್ ಅನ್ನು, ಬೆಲೆ ಹೆಚ್ಚಳದ ಕಾರಣದಿಂದ ರದ್ದುಪಡಿಸಲಾಗಿದೆ. ಆ ಪ್ರಸ್ತಾವವನ್ನು ಮರುಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಕಿಟ್ ವಿತರಣೆಗೆ ಮೊದಲು ವಿತರಣಾ ಜಾಲವನ್ನೂ ಸಜ್ಜುಗೊಳಿಸ ಬೇಕಾಗಿದೆ ಎಂದು ಸಚಿವರು ಪ್ರತಿಕ್ರಿಯಿಸಿದರು.

# ದೇವಸ್ಥಾನದ ಬೀಗ ಮುರಿದು ಚಿನ್ನಾಭರಣ ಕಳವು

**ಹೊಳೆನರಸೀಪುರ:** ದೇವಸ್ಥಾನದ ಬೀಗ ಮುರಿದು ಒಳನುಗ್ಗಿದ ಕಳ್ಳರು ಚಿನ್ನ ಮತ್ತು ಬೆಳ್ಳಿ ಆಭರಣ ಸೇರಿ ಒಟ್ಟು 7.36 ಲ. ರೂ. ಮೌಲ್ಯದ ವಸ್ತುಗಳನ್ನು ಕಳವು ಮಾಡಿರುವ ಘಟನೆ ತಾಲ್ಲೂಕಿನ ಹಳೇಕೋಟೆ ಹೋಬಳಿ ಹಡವನಹಳ್ಳಿ ಗ್ರಾಮದ ಶ್ರೀ ಮೈಲಾರ ಲಿಂಗೇಶ್ವರ ದೇವಸ್ಥಾನದಲ್ಲಿ ನಡೆದಿದೆ.

ದೇವಸ್ಥಾನದಲ್ಲಿ ಪ್ರತಿ ಭಾನುವಾರ ವಿಶೇಷ ಪೂಜೆ ಹಾಗು ಅಲಂಕಾರ ನಡೆಯುವ ಹಿನ್ನಲೆ ಲಾಕರ್‌ನಲ್ಲಿದ್ದ ಆಭರಣಗಳನ್ನು ದೇವರಿಗೆ ಧರಿಸಲಾಗಿತ್ತು. ಅರ್ಚಕರು ಸಂಜೆ ಪೂಜೆ ಮುಗಿಸಿ ದೇವಸ್ಥಾನದ ಬಾಗಿಲಿಗೆ ಬೀಗ ಹಾಕಿಕೊಂಡು ಮನೆಗೆ ತೆರಳಿದ್ದರು. ಸೋಮವಾರ ಬೆಳಿಗ್ಗೆ ಬಂದು ನೋಡಿದಾಗ ದೇವರಿಗೆ ಧರಿಸಲಾಗಿದ್ದ ಆಭರಣಗಳು ನಾಪತ್ತೆಯಾಗಿರುವುದು ಗೊತ್ತಾಗಿದೆ.

ಮತ್ತೊಂದು ಪ್ರಕರಣದಲ್ಲಿ ದೇವಸ್ಥಾನದ ಗೋಪುರದ ಮೇಲೆ ಅಳವಡಿಸಲಾಗಿದ್ದ 6 ಹಿತ್ತಾಳೆ ಕಳಶ ಗಳನ್ನು ಕಳವು ಮಾಡಿರುವ ಘಟನೆ ಹಾಸನ ತಾಲ್ಲೂಕಿನ ಗೊರೂರು ಗೊರೂರು ಗ್ರಾಮದ ಶ್ರೀಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ನಡೆಸಿದೆ. ಈ ಸಂಬಂಧ ಉಪತಹಶೀಲ್ದಾರ್ ಹೆಚ್.ಎನ್. ಕುಮಾರಸ್ವಾಮಿ ಅವರು ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

# ಮಾದಕ ವ್ಯಸನ: ವಿದ್ಯಾರ್ಥಿಗಳಿಂದ ಜಾಗೃತಿ ಕಾರ್ಯಕ್ರಮ



• ಪ್ರಜೋದಯ ವರದಿ

**ಹಾಸನ:** ಯುವಕರಲ್ಲಿ ಹೆಚ್ಐವಿ, ಏಡ್ಸ್ ಹಾಗು ಮಾದಕ ಪದಾರ್ಥಗಳ ಸೇವನೆಯಿಂದಾಗುವ ದುಷ್ಪರಿಣಾಮದ ಕುರಿತು ಅರಿವು ಮೂಡಿ ಸುವ ಉದ್ದೇಶದಿಂದ ಮಲೆನಾಡು ತಾಂತ್ರಿಕ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆ. 31 ರಿಂದ ಸೆ.13ರ ವರೆಗೆ ನಡೆಯಲಿರುವಅಭಿಯಾನದಲ್ಲಿ ಕಾಲೇಜಿನ ಎನ್ಎಸ್ಎಸ್ ವಿದ್ಯಾರ್ಥಿ ಗಳು ಕಾಲೇಜು ಆವರಣ ಮಾತ್ರವ ಲ್ಲದೆ ಸಾರ್ವಜನಿಕ ವೇದಿಕೆಯಲ್ಲೂ ಅರಿವು ಕಾರ್ಯಕ್ರಮ ನಡೆಸುತ್ತಿ ದ್ದಾರೆ.

ಮಾದಕ ಪದಾರ್ಥ ಸೇವನೆಯಿಂದ ಆಗುವ ಸಾಮಾಜಿಕ ಮತ್ತು ಆರೋಗ್ಯ ಸಂಬಂಧಿತ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ಯುವಜನರಲ್ಲಿ ಮಾದಕ ದ್ರವ್ಯ ವಿರೋಧಿ ಮನೋಭಾವ ಬೆಳೆಸುವುದು, ಆರೋಗ್ಯಕರ ಮತ್ತು ಜವಾಬ್ದಾರಿಯುತ ಜೀವನ ಶೈಲಿಯನ್ನು ಉತ್ತೇಜಿಸುವ ಚಟುವಟಿಕೆಗಳಲ್ಲಿ ಮಕ್ಕಳು ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ.

ಯುವಜನರಲ್ಲಿ ಆರೋಗ್ಯ ಮತ್ತು ಸಾಮಾಜಿಕ ಹೊಣೆಗಾರಿಕೆಯ ಅರಿವು ಮೂಡಿಸುವ ಮೂಲಕ ಮಾದಕ ದ್ರವ್ಯ ಸೇವನೆಯಿಂದ ದೂರವಿರುವಂತೆ ಪ್ರೇರೇಪಿಸುವುದು ಅಭಿಯಾನದ ಆಶಯವಾಗಿದೆ ಎಂದು ಎನ್ಎಸ್ಎಸ್ ಕಾರ್ಯಕ್ರಮಾಧಿಕಾರಿ ಪ್ರೊ.ವಿಜಯಕುಮಾರ್ ಟೈಲಿ ಅವರು ತಿಳಿಸಿದ್ದಾರೆ.

# ಲಂಚದ ಆರೋಪ: ಡಿವೈಎಸ್ಪಿ ವಿರುದ್ಧ ಕ್ರಮಕ್ಕೆ ಆಗ್ರಹ

• ಪ್ರಜೋದಯ ವರದಿ



**ಹಾಸನ:** ಲಂಚ ಪಡೆದು ಅಮರ್ ಎಂಬ ಯುವಕ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಲು ಕಾರಣವಾಗಿರುವ ಹುಣಸೂರು ಉಪವಿಭಾಗದ ಡಿವೈಎಸ್ಪಿ ರವೀಶ್ ಹುಣಸೂರು ಹಾಗು ಸಿಬ್ಬಂದಿಯನ್ನುಅಮಾನತುಗೊಳಿಸಿ, ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಮಾದಿಗ ದಂಡೋರ ಸಂಘಟನೆ ವತಿಯಿಂದ ಬುಧವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಯಿತು.

ಮೈಸೂರು ಜಿಲ್ಲೆಯ ಹುಣಸೂರು ಉಪವಿಭಾಗದ ಬೆಟ್ಟದಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಳೆನರಸೀಪುರ ತಾಲ್ಲೂಕಿನ ಕಡವಿನ ಹೊಸಹಳ್ಳಿ ಗ್ರಾಮದ ಪರಿಶಿಷ್ಟ ಜಾತಿಗೆ ಸೇರಿದ ಯುವಕ ಅಮರ್ (28) ನಿಂದ 1.75 ಲಕ್ಷ ರೂ. ಹಣವನ್ನು ಡಿವೈಎಸ್ಪಿ ರವೀಶ್ ಹಾಗು ಸಿಬ್ಬಂದಿ ಲಂಚವಾಗಿ ಪಡೆದಿದ್ದಾರೆ. ಹಣ ಪಡೆದ ಬಳಿಕವೂ ಪ್ರಕರಣದಲ್ಲಿ ನ್ಯಾಯಒದಗಿಸದೆ ಬಿ-ರಿಪೋರ್ಟ್ ಸಲ್ಲಿಸಿದ್ದು, ಹಣವನ್ನು ಹಿಂದಿರುಗಿಸದೆ ವಂಚಿಸಿದ್ದಾರೆಂದು ಆರೋಪಿಸಿದರು.

ಅಪಘಾತವೊಂದರಲ್ಲಿ ವ್ಯಕ್ತಿಯೊಬ್ಬರ ಕಾಲು ಮುರಿದ ಹಿನ್ನಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಮರ್ ಅವರು ಪೊಲೀಸರನ್ನು ಸಂಪರ್ಕಿಸಿದ್ದರು. ಈ ಸಂದರ್ಭದಲ್ಲಿ ಡಿವೈಎಸ್ಪಿ ಹಾಗು ಸಿಬ್ಬಂದಿ ಹಣ ಪಡೆದಿದ್ದಾರೆ. ಹಣ ನೀಡಲು ಸಾಲ ಮಾಡಿದ್ದ ಅಮರ್, ಪ್ರಕರಣದಲ್ಲಿ ಅನ್ಯಾಯ ವಾಗಿದೆ ಎಂದು ಅಳಲು ತೋಡಿಕೊಂಡರೂ ಯಾವುದೇ ಪರಿಹಾರ ದೊರೆಯದ ಹಿನ್ನಲೆ ಮಾನಸಿಕವಾಗಿ ನೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾನೆಂದು ಪ್ರತಿಭಟನಾಕಾರರು ದೂರಿದರು.

ಮಂಗಳವಾರ ಮಧ್ಯಾಹ್ನ ಅಮರ್ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ವಿಷ ಸೇವಿಸುವ ಮುನ್ನ ಡಿವೈಎಸ್ಪಿ ಹಾಗು ಇಬ್ಬರು ಸಿಬ್ಬಂದಿಯ ವಿರುದ್ಧ ಆರೋಪಗಳನ್ನು ಮಾಡಿರುವ ವಿಡಿಯೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಪೊಲೀಸರೊಂದಿಗೆ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಸಂಭಾಷಣೆಯ ಎರಡು ಧ್ವನಿಮುದ್ರಿಕೆಗಳನ್ನೂ ಮನವಿಯೊಂದಿಗೆ ಲಗತ್ತಿಸಲಾಗಿದೆ. ಈ ಕುರಿತು ಹುಣಸೂರು ಉಪವಿಭಾಗ ಮಟ್ಟದಲ್ಲಿ ಸಮಗ್ರ ತನಿಖೆ ನಡೆಸಿ, ಆರೋಪಗಳು ಸಾಬೀತಾದಲ್ಲಿ ತಪ್ಪಿತ ಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳ ಬೇಕೆಂದು ಒತ್ತಾಯಿಸಿದರು.

ಆರೋಪಿತ ಅಧಿಕಾರಿಗಳು ಹಾಗು ಸಿಬ್ಬಂದಿಗೆ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ಹುದ್ದೆಗಳನ್ನು ನೀಡದೆ, ತನಿಖೆ ಪೂರ್ಣಗೊಳ್ಳುವವರೆಗೆ ಬೇರೆಡೆಗೆ ವರ್ಗಾಯಿಸಬೇಕು. ಅಮರ್ ಅವರಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಆಗ್ರಹಿಸಿ, ಜಿಲ್ಲಾಧಿಕಾರಿ ಮೂಲಕ ರಾಜ್ಯ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಪೊಲೀಸ್ ಮಹಾ ನಿರ್ದೇಶಕರು ಹಾಗು ಪಶ್ಚಿಮ ವಲಯದ ಐಜಿಪಿಗೆ ಮನವಿ ಸಲ್ಲಿಸಿದರು.

ಸಂಘಟನೆಯ ರಾಜ್ಯ ಕಾರ್ಯದರ್ಶಿ ಟಿ.ಆರ್.ವಿಜಯ್‌ಕುಮಾರ್, ಹರೀಶ್, ಮುನಿಸ್ವಾಮಿ,ಶಿವಮೂರ್ತಿ, ಸುನೀಲ್, ಸತೀಶ್, ವೀರಭದ್ರಪ್ಪ ಹಾಜರಿದ್ದರು.

# ಸಹಕಾರಿ ಕ್ಷೇತ್ರ ಅಭಿವೃದ್ಧಿಗೆ ಸೌಹಾರ್ದತೆ ಮುಖ್ಯ

• ಪ್ರಜೋದಯ ವರದಿ

**ಅರಸೀಕೆರೆ:** ಪರಸ್ಪರ ಸಹಕಾರ ಮತ್ತು ಸೌಹಾರ್ದತೆಯಿಂದ ಮಾತ್ರವೇ ಸಹಕಾರಿ ಕ್ಷೇತ್ರದ ಪ್ರಗತಿ ಸಾಧ್ಯವೆಂದು ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಶಶಿವಾಳ ಗಂಗಾಧರಪ್ಪ ಅವರು ಹೇಳಿದರು.

ಬ್ಯಾಂಕ್‌ಸಭಾಂಗಣದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಮೀನು ಅಭಿವೃದ್ಧಿ, ಟ್ರ್ಯಾಕ್ಟರ್ ಖರೀದಿ ಸೇರಿ ಹಲವು ಚಟುವಟಿಕೆಗಳನ್ನು ನಡೆಸಲು ಬ್ಯಾಂಕ್ ವತಿಯಿಂದ ಕಡಿಮೆ ಬಡ್ಡಿ ದರದಲ್ಲಿ ಅನ್ನದಾ ತರಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ. ಸರ್ಕಾರದ ಸವಲತ್ತು ಗಳನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕ ಪ್ರಗತಿ ಸಾಧಿಸಿದರೆ ಸೇವೆಗೆ ಸಾರ್ಥಕತೆ ಬರಲಿದೆ. ಸಂಘದ ನಿರ್ದೇ ಶಕರು, ಷೇರುದಾರರು ಸಹಕಾರ ಪಡೆದು ನಷ್ಟದ ಸುಳಿಯಲ್ಲಿ ಸಿಲುಕಿದ್ದ ಸಂಸ್ಥೆ ಲಾಭದತ್ತ ಮುಖ ಮಾಡಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಸೌಲಭ್ಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಬೇಲೂರು ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ದೇಶಾಣಿ ಆನಂದ್ ಅವರು ಮಾತನಾಡಿ, ರೈತರು ಪಡೆದ ಸಾಲವನ್ನು ಸಕಾಲಕ್ಕೆ ಪಾವತಿಸ ಬೇಕು. ಆಗ ಮಾತ್ರ ಸಹಕಾರಿ ಬ್ಯಾಂಕ್ ಪ್ರಗತಿ ಸಾಧಿಸಲು ಸಾಧ್ಯವೆಂದರು.

ಉಪಾಧ್ಯಕ್ಷ ತಿಪ್ಪನಹಳ್ಳಿ ಪರಮೇಶ್ವರಪ್ಪ, ನಿರ್ದೇಶಕರಾದ ಸಿದ್ದೇಗೌಡ, ಭೋಜಾನಾಯ್ಕ್, ಯಳವಾರೆ ಸಿದ್ದೇಶ್, ರವಿ, ದೇವರಾಜ್, ಮಾಯಮ್ಮ, ಸಿದ್ದ ಗಂಗಮ್ಮ, ಮನುಜ, ಹರೀಶ್, ಯೋಗೇಶ್ ವ್ಯವಸ್ಥಾಪಕ ಚಂದ್ರು, ಬಾಲನಾಯ್ಕರ್ ಮತ್ತಿತರರಿದ್ದರು.



# ಮಹಿಳಾ ನೌಕರರಿಗೆ ಸಂಘಟನಾ ಜವಾಬ್ದಾರಿ ನೀಡಲು ಬೈಲಾ

» ಮೊದಲನೇ ಪುಟದಿಂದ

ಮಹಿಳೆಯರಿಗೆ ಸಂಘಟನೆ ಯಲ್ಲಿ ಹೆಚ್ಚಿನ ಅವಕಾಶ ಕಲ್ಪಿಸುವ ಉದ್ದೇಶದಿಂದ ತಮ್ಮ ಅಧಿಕಾರಾವಧಿಯಲ್ಲಿ ಹಲವು ಮಹತ್ವದ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ಮಹಿಳೆಯರ ನಡುವೆ ಟೀಕೆ-ಟಿಪ್ಪಣಿಗಳು ಇರುವುದು ಸಹಜ. ಅವುಗಳನ್ನು ಸಂಪೂರ್ಣ ವಾಗಿ ನಿಲ್ಲಿಸಲು ಸಾಧ್ಯವಿಲ್ಲ. ಆದರೆ, ಟೀಕೆಗಳಿಂದಾಗಿ ನಮ್ಮ ಕೆಲಸಗಳು ನಿಲ್ಲಬಾರದು. ಮಹಿಳೆ ಯರು ಸಂಘಟನೆಯಲ್ಲಿ ಜವಾಬ್ದಾರಿ ವಹಿಸಿಕೊಂಡು ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸ ಬೇಕು. ಸರ್ಕಾರಿ ನೌಕರರ ಸಂಘದ ಇತಿಹಾಸದಲ್ಲಿ ಮಹಿಳಾ ನಾಯಕತ್ವಕ್ಕೆ ವಿಶೇಷ ಸ್ಥಾನವಿದೆ. ಮೇರಿ ದೇವಾಸಿಯಾ ಅವರ ಅಚಲ ಹೋರಾಟದ ಗುಣಗಳನ್ನು ಇಂದಿನ ಮಹಿಳಾ ನೌಕರರು ಮುಂದುವರಿಸಬೇಕೆಂದು ಕರೆ ನೀಡಿದರು.

ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ರಾಜ್ಯಾಧ್ಯಕ್ಷೆ ಡಾ.ಸಿ.ವಿ.ಶೈಲಜಾ ಅವರು ಮಾತನಾಡಿ, ಮಹಿಳೆ ಪ್ರಕೃತಿಯ ವಿಶೇಷ ಶಕ್ತಿಯಾಗಿದ್ದು, ಜಗತ್ತಿಗೆ ಜ್ಞಾನವನ್ನು ಹಂಚುವಲ್ಲಿ ಹಾಗು ಕರ್ತವ್ಯಬದ್ಧತೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾಳೆ. ದೇಶದ ಆರ್ಥಿಕ, ಸಾಮಾಜಿಕ, ವಿಜ್ಞಾನ ಕ್ಷೇತ್ರಗಳಲ್ಲಿ ಮಹಿಳೆಯರು ಅಪಾರ ಸಾಧನೆ ಮಾಡಿದ್ದಾರೆ. ಮಹಿಳೆಯರಿಗೆ ಸಮಾ ನತೆಯ ಹಕ್ಕು ದೊರಕುವಲ್ಲಿ ಬಸವಣ್ಣ ಅವರ ಚಿಂತನೆಗಳು ಹಾಗು ಸಂವಿಧಾನದ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿದ ಕಾನೂನು ರಕ್ಷಣೆ ಮಹತ್ವದ್ದಾ ಗಿದೆ. ನೌಕರರ ಸಂಘದ ರಾಜ್ಯಾಧ್ಯಕ್ಷ ಷಡಾಕ್ಷರಿ ಅವರು ಮಾತೃತ್ವ ರಜೆ, ಶಿಶುಪಾಲನಾ ರಜೆ ಹಾಗು ಋತುಚಕ್ರ ರಜೆ ಸೇರಿ ಹಲವು ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಸಹಕರಿಸಿದ್ದಾರೆಂದು.

ಷಡಾಕ್ಷರಿ ಅವರನ್ನು ಮಹಿಳಾ ವಿರೋಧಿ ಎಂದು ಬಿಂಬಿಸುವುದು ಸರಿಯಲ್ಲ. ಮಹಿಳೆಯರಿಗೆ ಇಷ್ಟೊಂದು ಅವಕಾಶ ಹಾಗೂ ಸೌಲಭ್ಯಗಳನ್ನು ಕಲ್ಪಿಸಿರುವವರು ಹೇಗೆ ಮಹಿಳಾ ವಿರೋಧಿಯಾ ಗುತಾರೆ. ಮಹಿಳೆಯರ ಸಂಕಷ್ಟ, ನೋವು, ಸುಖ-ದುಃಖಗಳನ್ನು ಹಂಚಿಕೊಳ್ಳುವುದರ ಜತೆಗೆ ಅವರ ಸಮಸ್ಯೆಗಳಿಗೆ ನೆರವಾಗುವ ಉದ್ದೇಶದಿಂದ ಮಹಿಳಾ ನೌಕರರ ಸಂಘವನ್ನು ಕಟ್ಟಲಾಗಿದೆ. ಪುರುಷರು ಹಾಗೂ ಮಹಿಳೆಯರು ಸಮಾನವಾಗಿ ಜೊತೆಯಾಗಿ ಸಾಗಬೇಕು ಎಂದು ಹೇಳಿದರು.

ಮಹಿಳೆಯರು ಇಂದು ಆರ್ಥಿಕ, ಸಾಮಾಜಿಕ ಸೇರಿ ಎಲ್ಲಾ ಕ್ಷೇತ್ರಗಳಲ್ಲೂ ಮುನ್ನಡೆಯು ತ್ತಿದ್ದಾರೆ. ಆದರೆ, ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಇನ್ನಷ್ಟು ಹೆಚ್ಚಬೇಕಿದೆ. ಶೇ.33 ರಷ್ಟು ಮಹಿಳಾ ಮೀಸಲಾತಿ ಜಾರಿಗೊಳಿಸುವ ಮೂಲಕ ಆ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ಮಹಿಳಾ ನೌಕರರಿಗೆ ಋತುಚಕ್ರ ರಜೆ ನೀಡುವ ವಿಚಾರವನ್ನು ವಿಧಾನಸಭೆ ಯಲ್ಲಿ ಪ್ರಸ್ತಾಪಿಸಿ, ಈ ಕುರಿತು ನಿರ್ಣಯ ಕೈಗೊಂಡು ಸರ್ಕಾರಕ್ಕೆ ಕಳುಹಿಸುವ ಅವಕಾಶ ದೊರೆತಿರುವುದು ಸಂತೋಷದ ಸಂಗತಿ. ಅದಕ್ಕೆ ರಾಜ್ಯಾಧ್ಯಕ್ಷ ಷಡಾಕ್ಷರಿ ಅವರ ಸಹಕಾರವೂ ಕಾರಣವಾಗಿದೆ ಎಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಕೆ.ಎಂ. ಶ್ರೀನಿವಾಸ್, ಸಂಘದ ಜಿಲ್ಲಾ ಅಧ್ಯಕ್ಷೆ ಕೆ.ವೀಣಾ, ಪ್ರಧಾನ ಕಾರ್ಯದರ್ಶಿ ಶೈಲಾ, ರಾಜ್ಯ ಖಜಾಂಚಿ ಕವಿತಾ ನಾಗರಾಜು, ವಕೀಲೆ ಗಿರಿ ಜಾಂಬಿಕೆ, ಗೌರವಾಧ್ಯಕ್ಷೆ ಡಾ.ಅನುಪಮ, ಉಪಾಧ್ಯಕ್ಷ ಶಿವಸ್ವಾಮಿ, ಸಂಘಟನಾ ಕಾರ್ಯದರ್ಶಿ ಜಿ.ಪಿ. ವಿಶ್ವನಾಥ್, ಟಿ.ರಾಜು, ಎಸ್.ಮಧು ಇತರರು ಇದ್ದರು.

# ಅರೇಹಳ್ಳಿಯಲ್ಲಿ ಸಾರ್ವಜನಿಕ ಸೀರತ್ ಪ್ರವಚನ

• ಪ್ರಜೋದಯ ವರದಿ




**ಅರೇಹಳ್ಳಿ:** ಬೇಲೂರು ತಾಲ್ಲೂಕು ಅರೇಹಳ್ಳಿಯ ಹಿರಾ ಕೇಂದ್ರದಲ್ಲಿ ಪ್ರವಾದಿ ಮಹಮ್ಮದ್ ಅವರ ಜೀವನ, ಸಂದೇಶ ಹಾಗು ಮಾನವೀಯ ಮೌಲ್ಯಗಳನ್ನು ಸಾರುವ ಉದ್ದೇಶದಿಂದ ಸೀರತ್ ಪ್ರವಚನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಜಮಾಅತೆ ಇಸ್ಲಾಮೀ ಹಿಂದ್ ಕಾರ್ಯದರ್ಶಿ ಮುಜೀಬ್ಬುರ್ ರೆಹಮಾನ್ ಅವರು ಮಾತನಾಡಿ, ಪ್ರವಾದಿ ಮಹಮ್ಮದ್ ಅವರು ತಮ್ಮ 40ನೇ ವಯಸ್ಸಿನಲ್ಲಿ ಪ್ರವಾದಿತ್ವವನ್ನು ಪಡೆ ದರು. ಕೇವಲ 23 ವರ್ಷಗಳ ಅವಧಿಯಲ್ಲಿ ಅರಬ್ ಸಮಾಜದಲ್ಲಿ ಮಹತ್ತರ ಬದಲಾವಣೆಯನ್ನು ತಂದ ಮಹಾನ್ ವ್ಯಕ್ತಿಯಾಗಿದ್ದಾರೆಂದರು.

ಅಂದಿನ ಅರಬ್ ಸಮಾಜದಲ್ಲಿ ಬೇರೂರಿದ್ದ ಅಸಮಾನತೆ, ಅನ್ಯಾಯ ಹಾಗು ಸಾಮಾಜಿಕ ಸಮಸ್ಯೆಗಳ ನಡುವೆ ನ್ಯಾಯ, ಸಮಾನತೆ, ಶಾಂತಿ ಮತ್ತು ಮಾನವೀಯ ಮೌಲ್ಯಗಳನ್ನು ಆಧರಿ ಸಿದ ಸಮಾಜ ನಿರ್ಮಾಣಕ್ಕೆ ಪ್ರವಾದಿಯವರು ಮಾರ್ಗದರ್ಶನ ನೀಡಿದರು. ಜಮಾಅತ್ ಮೂಲಕ ಪ್ರವಾದಿಗಳ ಹಿತಕಾರ್ಯ ಹಾಗು ಅವರ ಜೀವನ ಸಂದೇಶಗಳನ್ನು ಜನರಿಗೆ ತಲುಪಿ ಸುವ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಶಾಂತಿ ಪ್ರಕಾಶನ ಸಂಸ್ಥೆಯ ವ್ಯವಸ್ಥಾಪಕ ಜನಾಬ್ ಮೊಹಮ್ಮದ್ ಕುಂಞ ಅವರು ಮಾತನಾಡಿ, ಪ್ರವಾದಿ ಮಹಮ್ಮದ್ ಅವರ ಜೀವನ ಮತ್ತು ಸಂದೇಶಗಳು ಇಂದಿನ ಸಮಾಜಕ್ಕೂ ಅತ್ಯಂತ ಪ್ರಸ್ತುತವಾಗಿವೆ. ನಾವಿಂದು ನಿರ್ದಾಯಿ ಸಮಾಜದಲ್ಲಿ ಬದುಕುತ್ತಿದ್ದೇವೆ. ಎಲ್ಲಾ ಧರ್ಮಗಳಲ್ಲಿಯೂ ಕರುಣೆ ರಹಿತವಾದ ಸಮಾಜ ನಿರ್ಮಾಣವಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಸುಳ್ಳುಗಳಿಂದ ತುಂಬಿರುವ ಸಮಾಜದಲ್ಲಿ ಮನುಷ್ಯರನ್ನು ವಿಭಜಿಸುವ ಸಿದ್ಧಾಂತಗಳು ಹೆಚ್ಚಾಗುತ್ತಿವೆ ಎಂದು ವಿಷಾದಿಸಿದರು.

ಮಾನವ ಕುಲದ ವಿಮೋಚಕರಾಗಿ ಪ್ರವಾದಿಗಳು ನೀಡಿದ ಸಂದೇಶವನ್ನು ಅರ್ಥಮಾಡಿ ಕೊಳ್ಳುವ ಅಗತ್ಯವಿದೆ. ಪ್ರವಾದಿಯವರ ಬದುಕು ಒಂದು ತೆರೆದ ಪುಸ್ತಕದಂತಿದ್ದು, ಜೀವನದ ಪ್ರತಿಯೊಂದು ಕ್ಷೇತ್ರಕ್ಕೂ ಮಾರ್ಗದರ್ಶನ ನೀಡುತ್ತದೆ. ಒಳ್ಳೆಯ ನಾಯಕ ತನ್ನ ಅನುಯಾಯಿ ಗಳನ್ನು ಪ್ರೀತಿಸುವಂತೆ ಪ್ರವಾದಿಯವರೂ ತಮ್ಮ ಅನುಯಾಯಿಗಳನ್ನು ಪ್ರೀತಿಯಿಂದ ಕಾಣು ತ್ತಿದ್ದರು. ಶಿಷ್ಯರನ್ನು ಸಹಾಬಿ ಎಂದು ಗೌರವದಿಂದ ಕರೆಯುತ್ತಿದ್ದರು. ದೇವರು ಯಾರು ಎಂಬುದರ ಪರಿಚಯವನ್ನು ಮಾಡಿ ಕೊಡುವುದರ ಜೊತೆಗೆ, ಮನುಷ್ಯನು ಹೇಗೆ ಬದುಕಬೇಕೆಂಬುದಕ್ಕೆ ಪ್ರವಾದಿಯವರು ಮಾರ್ಗದರ್ಶನ ನೀಡಿದ್ದಾರೆ. ಇಂದು ಜಗತ್ತಿನಲ್ಲಿ ಸುಮಾರು 200 ಕೋಟಿ ಮುಸ್ಲಿಮರು ಸರಳವಾದ ಸಿದ್ಧಾಂತ ಹಾಗು ಜೀವನ ಕ್ರಮ ಅನುಸರಿಸುತ್ತಿದ್ದಾರೆ. ಭಯವಿಲ್ಲದೆ ಬದುಕುವುದೇ ಸುಖ ಜೀವನದ ಗುಟ್ಟಾಗಿದ್ದು ಅನ್ಯರು ಎಂಬ ಭಾವನೆ ನಮ್ಮಲ್ಲಿ ಮೂಡುವುದೇ ಹಲವು ಸಮಸ್ಯೆಗಳಿಗೆ ಕಾರಣವಾಗುತ್ತದೆ. ಮನುಷ್ಯರನ್ನು ವಿಭಜಿಸುವ ಬದಲು ಪರಸ್ಪರ ಪ್ರೀತಿ, ಸಹಬಾಳ್ವೆ, ಕರುಣೆ ಮತ್ತು ಮಾನವೀಯತೆಯೊಂದಿಗೆ ಬದುಕುವುದು ಅಗತ್ಯ. ಪ್ರವಾದಿಯವರ ಸಂದೇಶವು ಕೇವಲ ಸಿದ್ಧಾಂತವಾಗಿರದೆ, ಪ್ರಾಯೋಗಿಕ ಬದುಕಿಗೆ ಮಾರ್ಗ ದರ್ಶನ ನೀಡುವ ಸಿದ್ಧಾಂತವಾಗಿದೆ ಎಂದು ಹೇಳಿದರು.

ಜಮಾಅತೆ ಇಸ್ಲಾಮೀ ಹಿಂದ್‌ನ ಹೋಬಳಿ ಘಟಕದ ಅಧ್ಯಕ್ಷ ಇರ್ಫಾನ್ ಅಸರ್ ಉಮ್ರಿ, ಪದಾಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

# ಸೆ. 5ರಂದು ಬಂಜೆತನ ಉಚಿತ ಚಿಕಿತ್ಸಾ ಶಿಬಿರ

• ಪ್ರಜೋದಯ ವರದಿ

**ಹಾಸನ:** ನಗರದ ಬಿ.ಎಂ.ರಸ್ತೆಯಲ್ಲಿರುವ ರಾಜೀವ್ ಆಯುರ್ವೇದ ಆಸ್ಪತ್ರೆಯಲ್ಲಿ ಸೆ.5ರ ಶನಿವಾರ ಬೆಳಿಗ್ಗೆ 9 ರಿಂದ ಸಂಜೆ 5ರ ವರೆಗೆ ಬಂಜೆತನ ಉಚಿತ ತಪಾಸಣೆ, ಸಲಹೆ ಹಾಗು ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಶಿಬಿರದಲ್ಲಿ ಬಂಜೆತನ ಹಾಗು ಗರ್ಭಧಾರಣೆಯ ಸಮಸ್ಯೆಗಳಿಗೆ ನುರಿತ ಆಯುರ್ವೇದ ಪ್ರಸೂತಿ ಮತ್ತು ಸ್ತ್ರೀ ರೋಗ ಚಿಕಿತ್ಸಾ ತಜ್ಞ ವೈದ್ಯರು ತಪಾಸಣೆ, ಸಲಹೆ ಹಾಗು ಚಿಕಿತ್ಸೆ ನೀಡಲಿದ್ದಾರೆ.

ಗರ್ಭ ಧಾರಣೆಯ ಸಮಸ್ಯೆಗಳಿಗೆ ಆಹಾರ ಕ್ರಮ, ಪಥ್ಯ, ವ್ಯಾಯಾಮ, ಆಪ್ತ ಸಮಾ ಲೋಚನೆ, ಮಾರ್ಗ ದರ್ಶನ ವನ್ನು ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗೆ 08172-296663, 7899200672 ಇಲ್ಲಿಗೆ ಸಂಪರ್ಕಿಸ ಬಹುದೆಂದು ಕಾಲೇಜಿನ ಪ್ರಾಂಶು ಪಾಲ ಡಾ||ಎಸ್.ಎ. ನಿತಿನ್ ತಿಳಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK